ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷ ಸೇರಿ ಜಾಗತಿಕ ಸವಾಲುಗಳನ್ನು ಎದುರಿಸುವಲ್ಲಿ ಇಂದಿನ ಅಂತರರಾಷ್ಟ್ರೀಯ ವ್ಯವಸ್ಥೆಯು (ಸಂಬಂಧಗಳು) ವಿಫಲ ವಾಗಿದೆ ಎಂದು ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಕಳವಳ ವ್ಯಕ್ತಪಡಿಸಿದ್ದಾರೆ.

25 ಸೆಪ್ಟೆಂಬರ್, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ -194 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ವೀರಭದ್ರ, ದೇವರ ಇತಿಹಾಸ ಹೇಳುವ ರುದ್ರಾಭಿಷೇಕಂ ತೆರೆಗೆ » 2



ಜಮೀನು ಸ್ವಾಧೀನಕ್ಕೆ ಮುಂದಾದ ಅರಣ್ಯ ಇಲಾಖೆ » 3



ಬರ : ಶ್ರದ್ಧೆ-ಭಕ್ತಿಯಿಂದ ಹಾಸನಾಂಬ ದರ್ಶನೋತ್ಸವ » 4

# ರೈತರಿಗೆ 2,500 ರೂ. ಆರ್ಥಿಕ ನೆರವು

• ಪ್ರಜೋದಯ ವರದಿ

- ವಿಧಾನಸಭೆಯಲ್ಲಿ ಡಾ.ಜಿ.ಪರಮೇಶ್ವರ್ ಘೋಷಣೆ
- 1,250 ಕೋ. ರೂ. ವೆಚ್ಚ

**ಬೆಂಗಳೂರು:** ರಾಜ್ಯದಲ್ಲಿ ಬರ ಪರಿಸ್ಥಿತಿ ತೀವ್ರಗೊಳ್ಳುತ್ತಿರುವ ಹಿನ್ನಲೆ ರೈತರಿಗೆ ತಕ್ಷಣದ ಆರ್ಥಿಕ ನೆರವು ನೀಡಲು ಸರ್ಕಾರ ಮುಂದಾಗಿದೆ. ಮೊದಲ ಹಂತವಾಗಿ ರಾಜ್ಯದ 46 ರಿಂದ 50 ಲಕ್ಷ ರೈತರ ಬ್ಯಾಂಕ್ ಖಾತೆಗೆ ತಲಾ 2,500 ರೂ. ನೇರವಾಗಿ ಜಮೆ ಮಾಡುವುದಾಗಿ ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಅವರು ವಿಧಾನಸಭೆಯಲ್ಲಿ ಘೋಷಿಸಿದ್ದಾರೆ.

ಅಧಿವೇಶನದಲ್ಲಿ ಬರ ಪರಿಸ್ಥಿತಿಯ ಕುರಿತ ಚರ್ಚೆಗೆ ಸರ್ಕಾರದ ಪರವಾಗಿ ಉತ್ತರಿಸಿದ ಅವರು, ಬರಗಾಲದಲ್ಲಿ ಸಂದರ್ಭದಲ್ಲಿ ಸರ್ಕಾರ ರೈತರ ಪರವಾಗಿ ನಿಲ್ಲಲಿದೆ. ಈ ತೀರ್ಮಾನವು ತಕ್ಷಣದಿಂದಲೇ ಜಾರಿಗೆ ಬರಲಿದ್ದು, ಅದಕ್ಕಾಗಿ ಸರ್ಕಾರ 1,250 ಕೋ.ರೂ. ವೆಚ್ಚ ಮಾಡಲಿದೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರದ ಬರ ಪರಿಹಾರ ಹಣವನ್ನು ಕಾಯದೆ, ರಾಜ್ಯ ಸರ್ಕಾರವೇ ತನ್ನ ಸಂಪನ್ಮೂಲಗಳಿಂದ ರೈತರಿಗೆ ತಾತ್ಕಾಲಿಕ ನೆರವು ನೀಡಲು ಮುಂದಾಗಿದೆ. ಬರ ಸಂಕಷ್ಟದಿಂದ ತೊಂದರೆಗೊಳಗಾಗಿರುವ ರೈತರಿಗೆ ತಾತ್ಕಾಲಿಕ ಸಾಂತ್ವನದ ನೆರವಾಗಲಿದೆ. ಕೇಂದ್ರದಿಂದ ನೆರವು ಬಂದ ಬಳಿಕ ಮತ್ತೆ ಹಣ ಹಾಕಲಿದೆ ಎಂದರು.

ಯಾರೋ ಪ್ರತಿಭಟನೆ ನಡೆಸಿದರೂ ಅಥವಾ ಶಾಸಕರು ರಾಜೀನಾಮೆ ಬೆದರಿಕೆ ಹಾಕಿದರೆಂಬ ಕಾರಣಕ್ಕೆ ಸರ್ಕಾರ ಯಾವುದೇ ತಾಲ್ಲೂಕನ್ನು ಬರಪೀಡಿತವೆಂದು ಘೋಷಿಸಿಲ್ಲ. ಕೇಂದ್ರ ಸರ್ಕಾರದ ನಿಗದಿತ ಮಾರ್ಗಸೂಚಿ ಮತ್ತು ಮಾನದಂಡಗಳಿಗೆ ಒಳಪಟ್ಟ ತಾಲ್ಲೂಕುಗಳನ್ನು ಮಾತ್ರ ಬರಪೀಡಿತವೆಂದು ಘೋಷಿಸಲಾಗಿದೆ. ಇಂತ ಹದ್ದೇ ತಾಲ್ಲೂಕುಗಳನ್ನು ಸೇರಿಸ



ಬೇಕೆಂದು ಒತ್ತಡ ಹೇರಿಲ್ಲ. ಒತ್ತಡ ಹೇರಿರುವುದು ಸಾಬೀತಾದರೆ ಯಾವುದೇ ಶಿಕ್ಷೆಗೂ ಸಿದ್ಧ. ಇನ್ನೂ ಅರ್ಹ ತಾಲ್ಲೂಕುಗಳ ಪಟ್ಟಿ ಪರಿಶೀಲನೆಯಲ್ಲಿದೆ ಎಂದು ತಿಳಿಸಿದರು.

ರಾಜ್ಯದಲ್ಲಿ ಒಟ್ಟು 40 ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರದೇಶದಲ್ಲಿ ಬೆಳೆ ನಷ್ಟ ಸಂಭವಿಸಿದೆ. ಹೀಗಾಗಿ ರಾಜ್ಯದ ಭೀಕರ ಬರ ಪರಿಸ್ಥಿತಿಯನ್ನು ರಾಷ್ಟ್ರೀಯ ವಿಪತ್ತು ಎಂದು ಘೋಷಿಸುವಂತೆ ಕೋರಲು ಶೀಘ್ರದಲ್ಲೇ ನಿಯೋಗದೊಂದಿಗೆ ಪ್ರಧಾನಮಂತ್ರಿಯವರನ್ನು ಭೇಟಿ ಮಾಡಲಿದ್ದೇವೆಂದರು.

ರಾಜ್ಯದಲ್ಲಿ ದಾಖಲೆ ಪ್ರಮಾಣದ 49 ಲಕ್ಷ ರೈತರು ಬೆಳೆ ವಿಮೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಬೆಳೆ ವಿಮೆ ಯೋಜನೆಯಡಿ ರಾಜ್ಯ ಸರ್ಕಾರದ ಪಾಲಿನ 1,242 ಕೋ.ರೂ. ಮೊತ್ತವನ್ನು ಸರ್ಕಾರ ಒದಗಿಸಲಿದೆ. 16ನೇ ಹಣಕಾಸು ಆಯೋಗದ ಶಿಫಾರಸ್ಸಿನ ಪ್ರಕಾರ ಎಸ್‌ಡಿಆರ್‌ಎಫ್‌ನಿಂದ 922 ಕೋಟಿ ರೂ. ಬರಬೇಕಿದ್ದು, ಈವರೆಗೆ 446 ಕೋ.ರೂ. ಬಂದಿದೆ. ಬಾಕಿ ಮೊತ್ತ ಶೀಘ್ರವೇ ಬಿಡುಗಡೆಯಾಗುವ ನಿರೀಕ್ಷೆ ಇದೆ. ಸರ್ಕಾರದಲ್ಲಿ ಹಣದ ಕೊರತೆ ಇಲ್ಲವೆಂದು ಸ್ಪಷ್ಟಪಡಿಸಿದ ಸಚಿವರು, ರಾಜ್ಯದ ಹಣಕಾಸು ಸ್ಥಿತಿಯನ್ನು ಎಚ್ಚರಿಕೆ ಹಾಗು ಕಟ್ಟುನಿಟ್ಟಿನ ಆರ್ಥಿಕ ಶಿಸ್ತಿನಿಂದ ನಿರ್ವಹಿಸುತ್ತಿದ್ದೇವೆ. ಇಲ್ಲದಿದ್ದರೆ ರಾಜ್ಯ ದಿವಾಳಿಯಾಗುವ ಅಪಾಯವಿರುತ್ತದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮಲ್ಲಿ ಆರ್ಥಿಕ ಶಿಸ್ತು ಉತ್ತಮವಾಗಿದೆ ಎಂದು ತಿಳಿಸಿದರು.

### ನೆರವು ನೀಡುವುದು ಪ್ರಧಾನಿ ಕರ್ತವ್ಯ: ಸಿಎಂ

ಕರ್ನಾಟಕದಲ್ಲಿ 200ಕ್ಕೂ ಹೆಚ್ಚು ತಾಲ್ಲೂಕುಗಳು ಬರಕ್ಕೆ ತತ್ತರಿಸಿದ್ದು, ರೈತರ ಬೆಳೆಗಳು ನಾಶವಾಗಿವೆ. ವಿದ್ಯುತ್ ಉತ್ಪಾದನೆ ಕುಸಿದಿದೆ. ನೀರಿನ ಅಭಾವ ಹೆಚ್ಚಾಗಿದೆ. ಹೀಗಾಗಿ ಕರ್ನಾಟಕಕ್ಕೆ ನೆರವು ನೀಡುವುದು ಪ್ರಧಾನಮಂತ್ರಿ ಕರ್ತವ್ಯವೆಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬರ ಪರಿಹಾರ ವಿಚಾರವಾಗಿ ಸರ್ವಪಕ್ಷ ನಿಯೋಗ ದೆಹಲಿಗೆ ತೆರಳಿದ್ದು, ಪ್ರಧಾನಮಂತ್ರಿ ಭೇಟಿಗೆ ಸಮಯಾವಕಾಶ ಕೇಳಲಾಗಿದೆ. ವಿರೋಧ ಪಕ್ಷಗಳ ನಾಯಕರು ಹಾಗು ಸಂಸದರು ನಮಗೆ ನೆರವು ನೀಡುವ ವಿಶ್ವಾಸವಿದೆ ಎಂದರು.

# ಕ್ಯಾತನಹಳ್ಳಿ ಏತ ನೀರಾವರಿ: ಅನುದಾನಕ್ಕೆ ಒತ್ತಾಯ

• ಪ್ರಜೋದಯ ವರದಿ

**ಹಾಸನ:** ಕ್ಯಾತನಹಳ್ಳಿ ಏತ ನೀರಾವರಿ ಯೋಜನೆಯ 2ನೇ ಹಂತದ ಕಾಮಗಾರಿಗೆ 70 ಕೋ.ರೂ. ಅನುದಾನ ಬಿಡುಗಡೆ ಮಾಡಬೇಕೆಂದು ಶಾಸಕ ಹೆಚ್.ಪಿ.ಸ್ವರೂಪ್ ಅವರು ಅಧಿವೇಶನದಲ್ಲಿ ಸರ್ಕಾರವನ್ನು ಒತ್ತಾಯಿಸಿದರು.

ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ನೀರಿನ ಕೊರತೆಯಿಂದ ಕೃಷಿ ಚಟುವಟಿಕೆಗಳಿಗೆ ತೊಂದರೆಯಾಗುತ್ತಿದೆ. ಅದಕ್ಕಾಗಿ ಕ್ಯಾತನಹಳ್ಳಿ ಏತ ನೀರಾವರಿ ಯೋಜನೆ ಪ್ರಮುಖವಾಗಿದೆ. ಈಗಾಗಲೇ ಯೋಜನೆಯ ಮೊದಲ ಹಂತದ ಮೂಲಕ ಸುಮಾರು 13 ಗ್ರಾಮಗಳ 21 ಕೆರೆಗಳಿಗೆ ನೀರು ಹರಿಸುವ ವ್ಯವಸ್ಥೆ ಕಲ್ಪಿಸಲಾಗಿದೆ. ಆ ಭಾಗದ ರೈತರಿಗೆ ನೀರಾವರಿ ಹಾಗೂ ಜಾನುವಾರುಗಳ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ದೊರೆಯುವಂತಾಗಿದೆ ಎಂದು ಸದನದ ಗಮನಕ್ಕೆ ತಂದರು.



ಯೋಜನೆಯ ಎರಡನೇ ಹಂತಕ್ಕೆ 70 ಕೋ.ರೂ. ಅನುದಾನ ಬಿಡುಗಡೆ ಮಾಡಿ ಕಾಮಗಾರಿ ಕೈಗೊಂಡಲ್ಲಿ 37ಕ್ಕೂ ಹೆಚ್ಚು ಕೆರೆಗಳಿಗೆ ನೀರು ತುಂಬಿಸಲು ಸಾಧ್ಯವಾಗಲಿದ್ದು, 5,685 ಎಕರೆಗೂ ಹೆಚ್ಚು ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ಕಲ್ಪಿಸಿದಂತಾಗಲಿದೆ. ಬರಗಾಲದ ಸಂದರ್ಭದಲ್ಲಿ ಕೆರೆಗಳಿಗೆ ನೀರು ತುಂಬಿಸುವುದರಿಂದ ಅಂತರ್ಜಲ ಮಟ್ಟ ಸುಧಾರಿಸುವುದರ ಜೊತೆಗೆ ಕೃಷಿ ಚಟುವಟಿಕೆಗಳಿಗೂ ಅನುಕೂಲವಾಗಲಿದೆ ಎಂದು ವಿವರಿಸಿದರು.

ನೀರಾವರಿ ಸೌಲಭ್ಯ ವಿಸ್ತರಣೆಯಿಂದ ಮಳೆ ಆಧಾರಿತ ಕೃಷಿಯ ಮೇಲಿನ ಅವಲಂಬನೆ ಕಡಿಮೆಯಾಗಲಿದೆ. ಕೃಷಿ ಉಳಿಸಿಕೊಳ್ಳಲು ರೈತರು ಎದುರಿಸುತ್ತಿರುವ ಹೆಚ್ಚುವರಿ ಆರ್ಥಿಕ ಹೊರೆಯೂ ತಗ್ಗಲಿದೆ. ಹೀಗಾಗಿ ಕೇವಲ ಒಂದು ಯೋಜನೆಯ ಕಾಮಗಾರಿಯಾಗಿ ಪರಿಗಣಿಸದೆ, ಕೃಷಿಯ ಭವಿಷ್ಯಕ್ಕೆ ಸಂಬಂಧಿಸಿದ ಪ್ರಮುಖ ಯೋಜನೆಯಾಗಿ ಕ್ಯಾತನಹಳ್ಳಿ ಏತನೀರಾವರಿ ಯೋಜನೆಯ ಎರಡನೇ ಹಂತವನ್ನು ಪರಿಗಣಿಸಬೇಕು. ವಿಳಂಬ ಮಾಡದೆ ಅನುದಾನ ಬಿಡುಗಡೆ ಕಾಮಗಾರಿಯನ್ನು ಆರಂಭಿಸಬೇಕೆಂದು ಮನವಿ ಮಾಡಿದರು.

# ವಿದ್ಯುತ್ ಸ್ಪರ್ಶ : ರೈತ ಸಾವು

• ಪ್ರಜೋದಯ ವರದಿ



**ಸಕಲೇಶಪುರ:** ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಆಕಸ್ಮಿಕವಾಗಿ ವಿದ್ಯುತ್ ಪ್ರವಹಿಸಿ ರೈತ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಬೆಳಗೋಡು ಹೋಬಳಿ ಕೆಲವಳ್ಳಿಯಲ್ಲಿ ಗುರುವಾರ ನಡೆದಿದೆ.

ಗಾಮದ ಅಭಿಷೇಕ್ (36) ಮೃತಪಟ್ಟಿದ್ದಾರೆ. 11 ಕೆ.ವಿ. ವಿದ್ಯುತ್ ಮಾರ್ಗಕ್ಕೆ ಅಲ್ಯೂಮಿನಿಯಂ ಏಣಿ ತಗುಲಿ ವಿದ್ಯುತ್ ಪ್ರವಹಿಸಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅಭಿಷೇಕ್ ತಂದೆ ನಿವೃತ್ತ ಸೈನಿಕರಾಗಿದ್ದು, ಅವರ ನಿಧನದ ಬಳಿಕ ಕೃಷಿ ಜವಾಬ್ದಾರಿಯನ್ನು ಅಭಿಷೇಕ್ ವಹಿಸಿಕೊಂಡಿದ್ದರು. ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಸಚಿವ ಶಿವಲಿಂಗೇಗೌಡರ ವಿರುದ್ಧ ಅಪಪ್ರಚಾರ



• ಪ್ರಜೋದಯ ವರದಿ

**ಹಾಸನ:** ಸಕಲೇಶಪುರದಲ್ಲಿ ಇತ್ತೀಚೆಗೆ ನಡೆದ ಪ್ರಜಾ ಸೇವೆ ಆಂದೋಲನದಲ್ಲಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಲಂಚಕ್ಕೆ ಪ್ರೇರಣೆ ನೀಡಿದ್ದಾರೆಂಬ ಅರ್ಥದಲ್ಲಿ ವಿರೋಧ ಪಕ್ಷಗಳು ಅಪಪ್ರಚಾರ ಮಾಡುತ್ತಿವೆ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಜಿ.ಬಿ.ಶಶಿಧರ್ ಅವರು ಹೇಳಿದರು.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ಕೆಲಸ ಮಾಡಿಕೊಟ್ಟ ಅಧಿಕಾರಿಗೆ ಗೌರವವಯುತವಾಗಿ ಕೊಡಬೇಕೆಂಬ ಹೇಳಿಕೆಗೆ ಸಚಿವರು ಈಗಾಗಲೇ ಸ್ಪಷ್ಟನೆ ನೀಡಿದ್ದಾರೆ. ಕಾರ್ಯಕ್ರಮದ ಸಂಪೂರ್ಣ ಹಿನ್ನಲೆ ಮತ್ತು ಸಚಿವರು ನೀಡಿದ ವಿವರಣೆ ಗಮನಿಸದೆ ಸಾಮಾಜಿಕ ಜಾಲತಾಣ

» ನಾಲ್ಕನೇ ಪುಟದಲ್ಲಿ

# ಜೆಡಿಎಸ್ ಸಂಘಟನೆಗೆ ಒತ್ತು: ಪದಾಧಿಕಾರಿಗಳ ಬದಲಾವಣೆ

## ಜಿಲ್ಲಾಧ್ಯಕ್ಷರಾಗಿ ನಟರಾಜ್ ಐಸ್ವಾಮಿಗೌಡ, ಗೌರವಾಧ್ಯಕ್ಷರಾಗಿ ಬಾಳ್ಳು ಜಗನ್ನಾಥ್ ಆಯ್ಕೆ

• ಪ್ರಜೋದಯ ವರದಿ

**ಹಾಸನ:** ಮುಂಬರುವ ಸ್ಥಳೀಯ ಸಂಸ್ಥೆ ಹಾಗು ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಕ್ಷ ಸಂಘಟನೆಗೆ ಒತ್ತು ನೀಡಿರುವ ಜೆಡಿಎಸ್ ನೂತನ ಜಿಲ್ಲಾ ಘಟಕ ರಚಿಸಿದೆ.

ಜೆಡಿಎಸ್ ನೂತನ ಜಿಲ್ಲಾಧ್ಯಕ್ಷರನ್ನಾಗಿ ಬೇಲೂರು ತಾಲ್ಲೂಕಿನ ನಟರಾಜ್ ಐಸ್ವಾಮಿಗೌಡ, ಜಿಲ್ಲಾ ಗೌರವಾಧ್ಯಕ್ಷರನ್ನಾಗಿ ಸಕಲೇಶಪುರ ತಾಲ್ಲೂಕಿನ ಬಾಳ್ಳು ಜಗನ್ನಾಥ್, ಕಾರ್ಯಾಧ್ಯಕ್ಷರನ್ನಾಗಿ ಅರಸೀಕೆರೆ ತಾಲ್ಲೂಕಿನ ಬಾಣಾವರ ಅಶೋಕ್, ಕಾರ್ಯದರ್ಶಿಯನ್ನಾಗಿ ಹಾಸನ ತಾಲ್ಲೂಕಿನ ಹೆಚ್.ಎಲ್. ರಾಮಚಂದ್ರ, ಸಹ ಕಾರ್ಯದರ್ಶಿಯನ್ನಾಗಿ ನಗರದ ಸಿ.ಕ್ರಾಂತಿ ಪ್ರಸಾದ್ ತ್ಯಾಗಿ ಅವರನ್ನು ನೇಮಕ ಮಾಡಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ದೇವೇಗೌಡರು ಆದೇಶ ಹೊರಡಿಸಿದ್ದಾರೆ.

ಒಂದು ದಶಕಕ್ಕೂ ಹೆಚ್ಚು ಕಾಲ ಜೆಡಿಎಸ್ ಜಿಲ್ಲಾಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದ ಮಾಜಿ ಶಾಸಕ ಕೆ.ಎಸ್.ಲಿಂಗೇಶ್ ಅವರನ್ನು ಬದಲಾಯಿಸಿ, ಬೇಲೂರು ಕ್ಷೇತ್ರದ ವೀರಶೈವ-ಲಿಂಗಾಯಿತ ಸಮುದಾಯದ ನಟರಾಜ್ ಐಸಾಮಿಗೌಡ ಅವರಿಗೆ ಜಿಲ್ಲೆಯ ಜವಾಬ್ದಾರಿ ವಹಿಸಲಾಗಿದೆ. ಲಿಂಗಾಯಿತ ಸಮಾಜದ ಪ್ರಮುಖ ಮುಖಂಡರಾಗಿರುವ ಐಸಾಮಿಗೌಡ ಅವರ ಕುಟುಂಬವು ದೇವೇಗೌಡ ಕುಟುಂಬದೊಂದಿಗೆ ಹಲವು ವರ್ಷಗಳಿಂದ ನಿಕಟ ಬಾಂಧವ್ಯ ಹೊಂದಿದೆ. ಐಸಾಮಿಗೌಡ ಅವರ ಪತ್ನಿ ಜಿಲ್ಲಾ ಪಂಚಾಯಿತಿ ಸದಸ್ಯರಾಗಿಯೂ ಕಾರ್ಯನಿರ್ವಹಿಸಿದ್ದರು. ಬೇಲೂರು ತಾಲ್ಲೂಕಿನ ಅರೇಹಳ್ಳಿ ಭಾಗದಲ್ಲಿ ಪಕ್ಷದ ಸಂಘಟನೆಯೊಂದಿಗೆ ಗುರುತಿಸಿಕೊಂಡಿರುವ ನಟರಾಜ್ ಅವರನ್ನು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನಲೆ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಲಾಗಿದೆ.





ನಟರಾಜ್ | ಜಗನ್ನಾಥ್ | ಅಶೋಕ್ | ರಾಮಚಂದ್ರ | ಕ್ರಾಂತಿ

ಸಕಲೇಶಪುರ ತಾಲ್ಲೂಕು ಭಾಗದ ವೀರಶೈವ-ಲಿಂಗಾಯಿತ ಸಮಾಜದ ಮುಖಂಡ, ಕಾಫಿ ಬೆಳೆಗಾರರಾಗಿರುವ ಬಾಳುಪೇಟೆಯ ಜಗನ್ನಾಥ್ ಅವರಿಗೆ ಜಿಲ್ಲಾ ಗೌರವಾಧ್ಯಕ್ಷ ಸ್ಥಾನ ನೀಡಲಾಗಿದೆ. ಜಗನ್ನಾಥ್ ಅವರು ದೇವೇಗೌಡರೊಂದಿಗೆ ಹಲವು ವರ್ಷಗಳಿಂದ ಉತ್ತಮ ಬಾಂಧವ್ಯ ಹೊಂದಿದ್ದು, ಜೆಡಿಎಸ್ ಸಂಘಟನೆಯಲ್ಲಿ ಗುರುತಿಸಿಕೊಂಡಿರುವ ಹಿರಿಯ ಮುಖಂಡರಾಗಿದ್ದಾರೆ. ಅವರಿಗೆ ಗೌರವಾಧ್ಯಕ್ಷ ಸ್ಥಾನ ನೀಡುವ ಮೂಲಕ ಸಂಘಟನೆಯಲ್ಲಿ ಅವರ ಅನುಭವವನ್ನು ಬಳಸಿಕೊಳ್ಳಲು ಪಕ್ಷ ಮುಂದಾಗಿದೆ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅರಸೀಕೆರೆ ಕ್ಷೇತ್ರದಿಂದ ಜೆಡಿಎಸ್ ಟಿಕೆಟ್‌ನ ಪ್ರಮುಖ ಆಕಾಂಕ್ಷಿಯಾಗಿದ್ದ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಬಾಣಾವರ ಅಶೋಕ್ ಅವರಿಗೆ ಅಂತಿಮ ಹಂತದಲ್ಲಿ ಟಿಕೆಟ್ ಲಭಿಸಿರಲಿಲ್ಲ. ಆದರೂ ಪಕ್ಷದೊಂದಿಗೆ ಗುರುತಿಸಿಕೊಂಡು ಸಂಘಟನಾ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದರು. ಪಕ್ಷದ ಹಿರಿಯ ನಾಯಕರೊಂದಿಗೆ ಹೊಂದಿರುವ ನಿಕಟ ಬಾಂಧವ್ಯದ ಹಿನ್ನಲೆ ಕಾರ್ಯಾಧ್ಯಕ್ಷ ಹೊಣೆ ನೀಡಲಾಗಿದೆ.

ಹಲವು ವರ್ಷಗಳಿಂದ ಪಕ್ಷದಲ್ಲಿ ಗುರುತಿಸಿಕೊಂಡಿರುವ ಹಾಸನ ತಾಲ್ಲೂಕಿನ ಹನುಮಂತಪುರ ಹೆಚ್.ಎಲ್.ರಾಮಚಂದ್ರ ಅವರಿಗೆ ಕಾರ್ಯದರ್ಶಿ ಹುದ್ದೆ ನೀಡಲಾಗಿದೆ. ದಲಿತಪರ ಹೋರಾಟಗಾರ ಚಂದ್ರ ಪ್ರಸಾದ್ ತ್ಯಾಗಿ ಅವರ ಪುತ್ರ, ಮಹಾನಗರ ಪಾಲಿಕೆ ಮಾಜಿ ಸದಸ್ಯ ಕ್ರಾಂತಿ ಪ್ರಸಾದ್ ತ್ಯಾಗಿ ಅವರಿಗೆ ಸಹ ಕಾರ್ಯದರ್ಶಿ ಸ್ಥಾನ ನೀಡಲಾಗಿದೆ.

**ದೇವೇಗೌಡರ ಸಮ್ಮುಖದಲ್ಲಿ ಸಭೆ**

ಬೆಂಗಳೂರಿನ ಪದ್ಮನಾಭ ನಗರದಲ್ಲಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಜಿಲ್ಲೆಯ ಜೆಡಿಎಸ್ ಶಾಸಕರು, ಮಾಜಿ ಶಾಸಕರು, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರು, ತಾಲ್ಲೂಕು ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು ಹಾಗು ಪಕ್ಷದ ಹಿರಿಯ ಮುಖಂಡರು ಭಾಗವಹಿಸಿದ್ದರು. ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ, ಪಕ್ಷ ಸಂಘಟನೆ ಹಾಗು ಜಿಲ್ಲಾ ಮತ್ತು ತಾಲ್ಲೂಕು ಘಟಕಗಳ ಪುನರ್ ರಚನೆ ಕುರಿತು ಸುದೀರ್ಘ ಚರ್ಚೆ ನಡೆಯಿತು.

ಸಭೆಯಲ್ಲಿ ಮಾಜಿ ಸಚಿವರಾದ ಹೆಚ್.ಡಿ. ರೇವಣ್ಣ, ಎ.ಮಂಜು, ಹೆಚ್.ಕೆ.ಕುಮಾರಸ್ವಾಮಿ, ಶಾಸಕ ಸಿ.ಎನ್.ಬಾಲಕೃಷ್ಣ, ಮಾಜಿ ಶಾಸಕ ಕೆ.ಎಸ್.ಲಿಂಗೇಶ ಸೇರಿ ಜಿಲ್ಲೆಯ ಪಕ್ಷದ ಮುಖಂಡರು ಹಾಜರಿದ್ದರು. ಎಲ್ಲರ ಸಹಮತ ಪಡೆದು ನೂತನ ಜಿಲ್ಲಾಧ್ಯಕ್ಷರನ್ನು ಆಯ್ಕೆ ಮಾಡಲಾಗಿದೆ. ಜಿಲ್ಲಾ ಘಟಕದ ಪುನರ್ ರಚನೆಯ ಜೊತೆಗೆ ತಾಲ್ಲೂಕು ಘಟಕಗಳ ಅಧ್ಯಕ್ಷರ ಬದಲಾವಣೆ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದೆ. ಮುಂದಿನ ದಿನಗಳಲ್ಲಿ ಆಯಾ ಕ್ಷೇತ್ರದ ಶಾಸಕರು, ಮಾಜಿ ಶಾಸಕರು, ಸ್ಥಳೀಯ ಮುಖಂಡರು ಹಾಗು ಸ್ಥಳೀಯ ನಾಯಕರೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಸಭೆಯಲ್ಲಿ ನಿರ್ಧರಿಸಲಾಗಿದೆ.

### ಮೂರು ಪಕ್ಷಗಳೂ ಲಿಂಗಾಯಿತರಿಗೆ ಪ್ರಾತಿನಿಧ್ಯ

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆ ಹಿನ್ನಲೆ ಜಿಲ್ಲೆಯಲ್ಲಿ ಜೆಡಿಎಸ್, ಕಾಂಗ್ರೆಸ್ ಮತ್ತು ಬಿಜೆಪಿ ಮೂರು ಪಕ್ಷಗಳು ವೀರಶೈವ ಲಿಂಗಾಯಿತ ಸಮುದಾಯಗಳ ಮುಖಂಡರಿಗೆ ಪ್ರಾತಿನಿಧ್ಯ ನೀಡುವ ಮೂಲಕ ಲಿಂಗಾಯಿತ ಮತಬ್ಯಾಂಕ್ ಮೇಲೆ ಕಣ್ಣು ಇಟ್ಟಿವೆ. ಬಿಜೆಪಿಯಲ್ಲಿ ಇದೇ ಸಮುದಾಯದ ಸಿದ್ದೇಶ್ ನಾಗೇಂದ್ರ ಅವರು ಜಿಲ್ಲಾ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿಯೂ ಇತ್ತೀಚೆಗೆ ಶಶಿಧರ್ ಅವರನ್ನು ನೇಮಕ ಮಾಡಿದೆ. ಜೆಡಿಎಸ್ ಕೂಡ ನಟರಾಜ್ ಐಸಾಮಿಗೌಡ ಅವರನ್ನು ನೇಮಕ ಮಾಡಲಾಗಿದೆ.

# ಪಿಎಫ್ ನೀತಿ ವಿರುದ್ಧ ಗಾರ್ಮೆಂಟ್ಸ್ ನೌಕರರ ಮುಷ್ಕರ

• ಪ್ರಜೋದಯ ವರದಿ

**ಅರಸೀಕೆರೆ:** ಕೇಂದ್ರ ಸರ್ಕಾರದ ಪಿಎಫ್ ನೀತಿಯನ್ನು ವಿರೋಧಿಸಿ ನಗರದ ಹೊರವಲಯದಲ್ಲಿರುವ ಅರವಿಂದ್ ಗಾರ್ಮೆಂಟ್ಸ್‌ನ ನೌಕರರು ಮುಷ್ಕರ ನಡೆಸಿ, ಸಂಸ್ಥೆಯ ಮುಂಭಾಗದಲ್ಲಿ ವಾಹನ ಸಂಚಾರ ತಡೆದು ಪ್ರತಿಭಟಿಸಿದರು.

ಪಿಎಫ್‌ಗೆ ಸಂಬಂಧಿಸಿದ ನೀತಿಗಳಿಂದ ನೌಕರರು ತೊಂದರೆ ಅನುಭವಿಸುತ್ತಿದ್ದು, ವೇತನದಿಂದ ಕಡಿತವಾಗುವ ಪಿಎಫ್ ಮೊತ್ತ, ಖಾತೆಗೆ ಜಮೆಯಾಗುವ ಹಣ ಹಾಗು ಅಗತ್ಯ ಸಂದರ್ಭದಲ್ಲಿ ಪಿಎಫ್ ಹಣ ಪಡೆಯುವ ಪ್ರಕ್ರಿಯೆಯಲ್ಲಿ ಹಲವು ಸಮಸ್ಯೆಗಳು ಎದುರಾಗುತ್ತಿವೆ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಪಿಎಫ್ ನೀತಿಯನ್ನು ಮರುಪರಿಶೀಲಿಸಿ, ನೌಕರರ ಹಿತದೃಷ್ಟಿಯಿಂದ ಅಗತ್ಯ ಕ್ರಮ ಕೈಗೊಳ್ಳಬೇಕು. ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಈ



ವಿಚಾರದಲ್ಲಿ ಮಧ್ಯಪ್ರವೇಶಿಸಿ, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಪಿಎಫ್ ಸಮಸ್ಯೆಯನ್ನು ಆದಷ್ಟು ಬೇಗ ಬಗೆಹರಿಸಿಕೊಡಬೇಕೆಂದು ಮನವಿ ಮಾಡಿದರು.

» ನಾಲ್ಕನೇ ಪುಟದಲ್ಲಿ

# ನಾಲೆಗೆ ಬಿದ್ದು ಯುವಕ ಸಾವು

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ನಿಯಂತ್ರಣ ತಪ್ಪಿ ಹೇಮಾವತಿ ನಾಲೆಗೆ ಬಿದ್ದು ಯುವಕನೊಬ್ಬ ಮೃತಪಟ್ಟಿರುವ ಘಟನೆ ಪಟ್ಟಣದಲ್ಲಿ ನಡೆದಿದೆ.

ಕೆಇಬಿ ನೌಕರ ಹೇಮಂತ್ (24) ಮೃತಪಟ್ಟ ಯುವಕ.

ಆಟೋ ಕುಮಾರ ಎಂದೇ ಪರಿಚಿತರಾಗಿದ್ದ ಹೇಮಂತ್, ಕಚೇರಿಯ ಪಕ್ಕದಲ್ಲೇ ಹಾದುಹೋಗಿರುವ ಹೇಮಾವತಿ ನಾಲೆಯ ಸಮೀಪ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ಬೈಕ್ ಸ್ಕಿಡ್ ಆಗಿ ನಾಲೆಗೆ ಬಿದ್ದಿದ್ದು, ನೀರಿನ ರಭಸಕ್ಕೆ ಕೊಚ್ಚಿಹೋಗಿದ್ದಾರೆ ಎನ್ನಲಾಗಿದೆ. ನಾಲೆಯಲ್ಲಿ ಭಾರೀ ಪ್ರಮಾಣದಲ್ಲಿ ನೀರು ಹರಿಯುತ್ತಿದ್ದ ಹಿನ್ನಲೆ ಹೇಮಂತ್ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

# ಜೈಲಿನಲ್ಲಿ ಗ್ಯಾಂಗ್ ವಾರ್ : ಹೊಸ ಕಾರಾಗೃಹಕ್ಕೆ ಪ್ರಸ್ತಾವನೆ

## ಜಿಲ್ಲಾ ಕಾರಾಗೃಹಕ್ಕೆ ಡಿಜಿಪಿ ಅಲೋಕ್ ಕುಮಾರ್ ಭೇಟಿ

• ಪ್ರಜೋದಯ ವರದಿ

**ಹಾಸನ:** ಕಾರಾಗೃಹ ಮತ್ತು ಸುಧಾರಣಾ ಸೇವೆಗಳ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಅಲೋಕ್‌ಕುಮಾರ್ ಅವರು ಗುರುವಾರ ನಗರದ ಜಿಲ್ಲಾ ಕಾರಾಗೃಹಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಸುಮಾರು ಒಂದೂವರೆ ಗಂಟೆಗಳ ಕಾಲ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ, ಜೈಲು ಅಧೀಕ್ಷಕ ಪ್ರಸನ್ನ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀನಿಧಿ, ಡಿವೈಎಸ್‌ಪಿ ಗಂಗಾಧರಪ್ಪ ಸೇರಿ ಇತರ ಅಧಿಕಾರಿಗಳು ಹಾಜರಿದ್ದರು. ಪ್ರತಿ ಬ್ಯಾರಕ್‌ಗೂ ಭೇಟಿ ನೀಡಿದ ಅಲೋಕ್ ಕುಮಾರ್ ಅವರು ಖೈದಿಗಳೊಂದಿಗೆ ಸಮಾಲೋಚನೆ ನಡೆಸಿದರು. ಖೈದಿಗಳಿಗಾಗಿ ತಯಾರಿಸಿದ್ದ ಅಡುಗೆ ಸವಿದು ಗುಣಮಟ್ಟ ಪರಿಶೀಲಿಸಿದರು. ತಲೆ ಕೂದಲು ಕಟಿಂಗ್ ಮಾಡಿಸಿಕೊಳ್ಳದಿದ್ದ ಖೈದಿಗಳಿಗೆ ಖಡಕ್ ಎಚ್ಚರಿಕೆಯನ್ನೂ ನೀಡಿದರೆಂದು ತಿಳಿದುಬಂದಿದೆ.

ಪರಿಶೀಲನೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇದೇ ಮೊದಲ ಬಾರಿಗೆ ಜಿಲ್ಲಾ ಕಾರಾಗೃಹಕ್ಕೆ ಭೇಟಿ ನೀಡಿದ್ದೇನೆ. ಜೈಲಿನಲ್ಲಿ ಸ್ಥಳಾವಕಾಶ ಕಡಿಮೆ ಇದೆ. 250 ಖೈದಿಗಳು ಇರುವ ಜಾಗದಲ್ಲಿ 334 ಜನರಿದ್ದಾರೆ. ಹೊಸ ಜೈಲು ನಿರ್ಮಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ. ಖೈದಿಗಳು ಜೈಲಿನ ನಿಯಮದಂತೆ ಶಿಸ್ತು ಕಾಪಾಡಬೇಕು. ಆಹಾರ ಪರಿಶೀಲನೆ ಮಾಡಿದ್ದೇವೆ, ಗುಣಮಟ್ಟ ಕಾಪಾಡಿಕೊಳ್ಳಲಾಗಿದೆ. ಮೊದಲೆಲ್ಲಾ ಜೈಲಿನೊಳಗೆ ವಸ್ತುಗಳನ್ನು ಎಸೆಯುವ ಪರಿಪಾಠ ಇತ್ತು. ಅಂತಹ ಸೂಕ್ಷ್ಮ ಸ್ಥಳಗಳನ್ನೆಲ್ಲಾ ಪರಿಶೀಲಿಸಿದ್ದೇನೆ. ಅಂತಹ ಸಮಸ್ಯೆ ಕಂಡುಬಂದಿಲ್ಲವೆಂದರು.

ಕೆಲವು ಗ್ಯಾಂಗ್‌ಗಳು, ರೌಡಿ ಶೀಟರ್ ಮಂಜೇಶ್ ಕೊಲೆ ಪ್ರಕರಣದ ಹತ್ತು ಆರೋಪಿಗಳಿದ್ದಾರೆ. ಅವರನ್ನು ಮೈಸೂರಿಗೆ ಜೈಲಿಗೆ ಕಳುಹಿಸುತ್ತಿದ್ದೇವೆ. ಜೈಲಿನಲ್ಲಿ ಗ್ಯಾಂಗ್ ವಾರ್ ನಡೆಯುತ್ತಿರುವ ಕುರಿತು ಮಾಹಿತಿ ಇದೆ. ಕೆಲವರು ಬೇಕಂತಲೇ ಗಲಾಟೆ ಮಾಡಿದ್ದಾರೆ. ಗಲಾಟೆಗೆ ಪ್ರಚೋದನೆ ನೀಡುವವರನ್ನು ಶೀಘ್ರ ಸ್ಥಳಾಂತರ ಮಾಡಲಾಗುವುದೆಂದು ತಿಳಿಸಿದರು.

ಪರಿಶೀಲನೆ ವೇಳೆ ಮೊಬೈಲ್ ಸೇರಿ ಯಾವುದೇ ವಸ್ತುಗಳು ಸಿಕ್ಕಿಲ್ಲ. ಬೇರೆ ಜೈಲುಗಳಲ್ಲಿ ಮೊಬೈಲ್ ಸೀಜ್ ಮಾಡಿದ್ದೇವೆ. ಪರಪ್ಪನ ಅಗ್ರಹಾರ ಜೈಲಿನಲ್ಲೂ ಮೊಬೈಲ್ ಬಳಕೆ ಕಡಿಮೆ ಆಗಿದೆ. ಹಳೆಯ ಮೊಬೈಲ್‌ಗಳನ್ನು



> ಕೆಪಿಎಸ್‌ಸಿ ಅಕ್ರಮ ತನಿಖೆ ಕುರಿತು ಎಸ್‌ಐಟಿ ರಚಿಸಲಾಗಿತ್ತು. ಆದರೀಗ ಅದು ವಿಚಾರಣೆ ಹಂತದಲ್ಲಿದ್ದು, ನಾನು ಮಾತನಾಡುವುದಿಲ್ಲ.
> -ಅಲೋಕ್ ಕುಮಾರ್, ಡಿಜಿಪಿ

ಖೈದಿಗಳು ಬಳಸುತ್ತಿದ್ದರು. ಈಗ ಅವರಿಗೆ ಜೈಲು ಕರೆ ವ್ಯವಸ್ಥೆ ಮೂಲಕ ಮಾತನಾಡಲು ಅವಕಾಶ ಕೊಟ್ಟಿದ್ದೇವೆ. ಆದರೆ, ಫೋನ್ ಮೂಲಕ ಅಕ್ರಮ ಚಟುವಟಿಕೆ ನಡೆಸಬಾರದು. ಒಟ್ಟು 48 ಜೈಲು ಕರೆ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

**ಸ್ಥಳೀಯ ಪೊಲೀಸರಿಗೆ ಅಭಿನಂದನೆ**

ಅಪರಾಧ ಪ್ರಕರಣ ಆರೋಪದಡಿ 15 ವರ್ಷಗಳಿಂದ ತಲೆಮರಿಸಿಕೊಂಡಿದ್ದ ವ್ಯಕ್ತಿಯನ್ನು ಪತ್ತೆ ಹಚ್ಚಿದ ಮೂವರು ಕಾನ್ಸಟೇಬಲ್‌ಗಳಿಗೆ ಡಿಜಿಪಿ ಅಲೋಕ್ ಕುಮಾರ್ ಅಭಿನಂದಿಸಿದ್ದಾರೆ.

ಸಕಲೇಶಪುರದ ಮೂಲದ ಯುವಕನೊಬ್ಬ ಪ್ರಕರಣ ದಾಖಲಾಗುತ್ತಿದ್ದಂತೆ ನಾಪತ್ತೆಯಾಗಿದ್ದ. ಗೋವಾದ ಹೋಟೆಲ್‌ವೊಂದರಲ್ಲಿ ಅಡುಗೆಯವನಾಗಿ ಕೆಲಸ ಮಾಡಿಕೊಂಡಿದ್ದ ಆತನನ್ನು ಮೂರು ತಿಂಗಳ ಹಿಂದೆ ಪೊಲೀಸರು ಪತ್ತೆ ಹಚ್ಚಿದ್ದರು. ಈ ವಿಷಯ ತಿಳಿದ ಡಿಜಿಪಿ ಸಿಬ್ಬಂದಿಯನ್ನು ಜೈಲಿಗೆ ಕರೆಸಿ ಅಭಿನಂದಿಸಿದರು. ಪೊಲೀಸ್ ಅವಾರ್ಡ್‌ಗೆ ಮೂವರ ಹೆಸರನ್ನು ಶಿಫಾರಸ್ಸು ಮಾಡುವಂತೆ ಪೊಲೀಸ್ ವರಿಷ್ಠಾಧಿಕಾರಿಗೆ ನಿರ್ದೇಶನ ನೀಡಿದರು.

## ಡಿ ಗ್ರೂಪ್ ನೌಕರರಂತೆ ವರ್ತಿಸುತ್ತೀರಿ, ನಾಚಿಕೆ ಆಗಲ್ವಾ | ತೀವ್ರ ತರಾಟೆ

# ಸರ್ವೆ ಅಧಿಕಾರಿಗಳ ಬೆವರಿಳಿಸಿದ ಜಿಲ್ಲಾಧಿಕಾರಿ ಲತಾಕುಮಾರಿ

• ಪ್ರಜೋದಯ ವರದಿ

**ಹಾಸನ:** ಸಾರ್ವಜನಿಕರ ಕೆಲಸಗಳು ಸುಗಮವಾಗಿ ಆಗಬೇಕೆಂದು ಸರ್ಕಾರ ಪ್ರಜಾಸೇವಾ ಆಂದೋಲನ ಹಮ್ಮಿಕೊಂಡಿದೆ. ಸಲ್ಲಿಕೆಯಾದ ಅರ್ಜಿಗಳ ಕುರಿತು ಮಾಹಿತಿ ಇಟ್ಟುಕೊಳ್ಳದೇ ಏನು ಮಾಡುತ್ತಿದ್ದೀರಿ ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ಸರ್ವೆ ಅಧಿಕಾರಿಗಳ ವಿರುದ್ಧ ಹರಿಹಾಯ್ದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ನಡೆದ ಸಭೆಯಲ್ಲಿ ಆಕ್ರೋಶ ವ್ಯಕ್ತಪಡಿಸಿದ ಅವರು, ಹಾಸನ ಮತ್ತು ಸಕಲೇಶಪುರ ಸರ್ವೆಯರ್‌ಗಳ ವಿರುದ್ಧ ಕಿಡಿಕಾರಿದರು. ಇತ್ತೀಚೆಗೆ ಸಕಲೇಶಪುರದಲ್ಲಿ ನಡೆದ ಪ್ರಜಾ ಸೇವಾ ಆಂದೋಲನದಲ್ಲಿ ಸರ್ವೆಗೆ ಸಂಬಂಧಿಸಿ 67 ಅರ್ಜಿ ಬಂದಿವೆ. ಆದರೆ, ನೀವು 11 ಅರ್ಜಿಗಳು ಬಂದಿವೆ ಎನ್ನುತ್ತಿದ್ದೀರಿ.



ತಾಲ್ಲೂಕು ಮಟ್ಟದ ಅಧಿಕಾರಿಯಾಗಿ ಡಿ ಗ್ರೂಪ್ ನೌಕರರಂತೆ ವರ್ತಿಸುತ್ತಿದ್ದೀರಿ. ನಿಮಗೆ ನಾಚಿಕೆ ಆಗುವುದಿಲ್ಲವೇ ಎಂದು ತರಾಟೆಗೆ ತೆಗೆದುಕೊಂಡರು.

ಆಂದೋಲನದಲ್ಲಿ ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿಗೆ ಮೊದಲ ಆದ್ಯತೆ ನೀಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ನಾನು ಹೇಳಿದ್ದೇವೆ. ಅದಕ್ಕೂ ತಮಗೂ ಸಂಬಂಧವೇ ಇಲ್ಲವೆಂಬಂತೆ ಇದ್ದೀರಿ. ಇನ್ನೊಂದು ಪತ್ರ ಕಳುಹಿಸಿದ ಬಳಿಕ ಕ್ರಮ ಕೈಗೊಳ್ಳುವುದಾದರೆ ಸಭೆಯಲ್ಲಿ ನಾವು ಭಾಷಣ ಮಾಡಿದ್ದು ತಮಾಷೆಯೇ ಎಂದು ಖಾರವಾಗಿ ಪ್ರಶ್ನಿಸಿದರು.

ಕಾನೂನು ಬಾಹಿರವಾಗಿ ಕೆಲಸ ಮಾಡುವಂತೆ ನಿಮಗೆ ಹೇಳುತ್ತಿಲ್ಲ. ನಿಯಮ ಪ್ರಕಾರ ಕೆಲಸ ಮಾಡಿ ಎಂದು ಹೇಳಿದರೆ ಗಂಡಾಂತರ ಸೃಷ್ಟಿಸಿದ್ದೀರಿ. ದುರಸ್ತು, ಪೋಡಿ, ಮೋಜಿಣಿ ಮಾಡುವುದು ಅಸಾಧ್ಯ ಎನ್ನುವುದಾದರೆ ಅದಕ್ಕೆ ಕಾರಣ ಹೇಳಬೇಕು. ಏನೂ ಮಾಡದೆ ಸುಮ್ಮನಿದ್ದರೆ ನಾವು ಏನೆಂದು ತಿಳಿಯಬೇಕೆಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರಕರಣ ಏನೆಂಬುದನ್ನು ಮೊದಲು ಅರಿಯಬೇಕು. ಗ್ರಾಮ ಆಡಳಿತಾಧಿಕಾರಿ, ರಾಜಸ್ವ ನಿರೀಕ್ಷಕರು ನಿಮ್ಮ ಕೆಲಸ ಮಾಡಿಕೊಡಬೇಕಿಲ್ಲ. ತಾಲ್ಲೂಕು ಮಟ್ಟದ ಅಧಿಕಾರಿಗಳಾಗಿರುವ ನಿಮಗೂ ಜವಾಬ್ದಾರಿ ಇರುತ್ತದೆಂದರು. ಈ ವೇಳೆ ಉತ್ತರಿಸಲು ಮುಂದಾದ ಮಹಿಳಾ ಅಧಿಕಾರಿಯೊಬ್ಬರನ್ನು ತಡೆದ ಜಿಲ್ಲಾಧಿಕಾರಿ, ಮೊದಲು ಸಭೆ ಯಲ್ಲಿ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ತಿಳಿದುಕೊಳ್ಳಿ ಎಂದು ಚಾಟಿ ಬೀಸಿದರು.

» ನಾಲ್ಕನೇ ಪುಟದಲ್ಲಿ

### ಜಿಲ್ಲಾಧಿಕಾರಿ ಮ್ಯಾರಾಥಾನ್ ಸಭೆ

ಸೆ.19ರಂದು ಸಕಲೇಶಪುರದಲ್ಲಿ ನಡೆದ ಪ್ರಜಾ ಸೇವಾ ಆಂದೋಲನ ಸಭೆಯನ್ನು ಗಂಭೀರವಾಗಿ ಪರಿಗಣಿಸಿರುವ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಅವರು ಸಲ್ಲಿಕೆಯಾದ ಅರ್ಜಿ ವಿಲೇವಾರಿಗೆ ಅವಿರತ ಶ್ರಮ ವಹಿಸುತ್ತಿದ್ದಾರೆ.

ಕಳೆದ ಎರಡು ದಿನಗಳಿಂದ ಬೆಳಿಗ್ಗೆ 8.30ರಿಂದಲೇ ಸಭೆ ನಡೆಸುತ್ತಿದ್ದಾರೆ. ಸಕಲೇಶಪುರದಲ್ಲಿ ಸರ್ವೆ ಇಲಾಖೆಗೆ ಸಂಬಂಧಿಸಿ ದೂರುಗಳು ಹೆಚ್ಚಿನ ಪ್ರಮಾಣದಲ್ಲಿ ಕೇಳಿಬಂದವು. ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರು, ಕೆಲಸ ಮಾಡಿಕೊಟ್ಟ ಅಧಿಕಾರಿಗೆ ಗೌರವವಯುತವಾಗಿ ಕೊಡಬೇಕೆಂಬ ಹೇಳಿಕೆ ಕೂಡ ಸಾಕಷ್ಟು ಚರ್ಚೆಗೆ ಗ್ರಾಸವಾಗಿತ್ತು. ಈ ಹಿನ್ನಲೆಯಲ್ಲಿ ಮ್ಯಾರಾಥಾನ್ ಸಭೆ ಮೂಲಕ ತ್ವರಿತಗತಿಯಲ್ಲಿ ಅರ್ಜಿ ವಿಲೇವಾರಿಗೆ ಕ್ರಮ ಕೈಗೊಂಡಿದ್ದಾರೆ ಎನ್ನಲಾಗಿದೆ.

E-mail : prajodayahsn@gmail.com
ಪ್ರಜೋದಯ
25 ಸೆಪ್ಟೆಂಬರ್ 2026 ಶುಕ್ರವಾರ

# ಸಿನಿ ಪ್ರಜಾ

## ಸೆಪ್ಟೆಂಬರ್ 25ಕ್ಕೆ ಪ್ರೇಮದ ಊರಲಿ ಗ್ರ್ಯಾಂಡ್ ಎಂಟ್ರಿ

### ಹಾಡುಗಳ ಹವಾ ಜೋರು!



ರಾಷ್ಟ್ರಪ್ರಶಸ್ತಿ ವಿಜೇತ ನಿರ್ದೇಶಕ ಮನೋಜ್ ಕುಮಾರ್ ನಿರ್ದೇಶನದ ಬಹುನಿರೀಕ್ಷಿತ ಪ್ರೇಮದ ಊರಲಿ ಸಿನಿಮಾ ಸೆಪ್ಟೆಂಬರ್ 25ರಂದು ರಾಜ್ಯಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಶ್ರೀರಾಮ್ ನಾಯಕನಾಗಿ ನಟಿಸಿರುವ ಈ ಚಿತ್ರದಲ್ಲಿ ತಪಸ್ವಿನಿ ಪೂಣಚ್ಚ ಹಾಗೂ ರಮಿಕಾ ಶಿವು ನಾಯಕಿಯರಾಗಿ ಅಭಿನಯಿಸಿದ್ದು, ಹಿರಿಯ ನಟ ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇತ್ತೀಚೆಗೆ ನಡೆದ ಸುದ್ದಿಗೋಷ್ಠಿಯಲ್ಲಿ ಚಿತ್ರತಂಡ ಬಿಡುಗಡೆ ದಿನಾಂಕವನ್ನು ಅಧಿಕೃತವಾಗಿ ಘೋಷಿಸುವುದರ ಜೊತೆಗೆ ಸಿನಿಮಾದ ನಿರ್ಮಾಣದ ಅನುಭವ ಮತ್ತು ಹಾಡುಗಳಿಗೆ ಸಿಗುತ್ತಿರುವ ಭರ್ಜರಿ ಪ್ರತಿಕ್ರಿಯೆಯ ಕುರಿತು ಮಾಹಿತಿ ಹಂಚಿಕೊಂಡಿತು.

ನಿರ್ದೇಶಕ ಮನೋಜ್ ಕುಮಾರ್ ಮಾತನಾಡಿ, ಟೀಸರ್ ಹಾಗೂ ಹಾಡುಗಳು ಬಿಡುಗಡೆಯಾದ ಬಳಿಕ ಮಾಧ್ಯಮಗಳು ಮತ್ತು ಪ್ರೇಕ್ಷಕರು ನೀಡುತ್ತಿರುವ ಬೆಂಬಲಕ್ಕೆ ಕೃತಜ್ಞತೆ ಸಲ್ಲಿಸಿದರು. ಪ್ರೇಮದ ಊರಲಿಯ ಎಲ್ಲಾ ಹಾಡುಗಳು ಈಗಾಗಲೇ ಜನಪ್ರಿಯವಾಗಿದ್ದು, ನಾಗಣ್ಣನ ಸುಂದರ ಕುಟುಂಬದ ಸುತ್ತ ಸಾಗುವ ಕಥೆಯಲ್ಲಿ ಪ್ರೀತಿ, ಕೌಟುಂಬಿಕ ಬಾಂಧವ್ಯ ಮತ್ತು ಸಂಗೀತ ಪ್ರಮುಖ ಪಾತ್ರ ವಹಿಸಲಿದೆ ಎಂದು ಹೇಳಿದರು. ಗ್ರಾಮೀಣ ಹಿನ್ನೆಲೆಯ ಈ ಕೌಟುಂಬಿಕ ಕಥೆ ಚಿತ್ರಮಂದಿರದಲ್ಲಿ ಪ್ರೇಕ್ಷಕರಿಗೆ ವಿಶೇಷ ಅನುಭವ ನೀಡಲಿದೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು, ರಂಗಾಯಣ ರಘು ಅವರ ಅನುಭವಿ ಅಭಿನಯ ಹಾಗೂ ಶ್ರೀರಾಮ್ ಮತ್ತು ಇಬ್ಬರು ನಾಯಕಿಯರ ಉತ್ತಮ ನಟನೆ ಚಿತ್ರದ ಪ್ರಮುಖ ಆಕರ್ಷಣೆಗಳಾಗಿವೆ ಎಂದರು.

ನಾಯಕ ಶ್ರೀರಾಮ್ ಮಾತನಾಡಿ, ಚಿತ್ರದ ಟೈಟಲ್ ಟ್ರ್ಯಾಕ್ ಸಾಮಾಜಿಕ ಜಾಲತಾಣಗಳಲ್ಲಿ ದೊಡ್ಡ ಮಟ್ಟದಲ್ಲಿ ವೈರಲ್ ಆಗಿದ್ದು, 1.5 ಲಕ್ಷಕ್ಕೂ ಅಧಿಕ ರೀಲ್‌ಗಳು ಸೃಷ್ಟಿಯಾಗಿರುವುದು ಸಂತಸ ತಂದಿದೆ ಎಂದರು. ಆಟೋ ಚಾಲಕರು ಚಿತ್ರದ ಹೆಸರಿನ ಸ್ಟಿಕ್ಕರ್‌ಗಳನ್ನು ತಮ್ಮ ವಾಹನಗಳಿಗೆ ಅಂಟಿಸಿಕೊಂಡು ಸಿನಿಮಾದ ಮೇಲಿನ ಪ್ರೀತಿಯನ್ನು ವ್ಯಕ್ತಪಡಿಸುತ್ತಿರುವುದನ್ನೂ ಅವರು ನೆನಪಿಸಿಕೊಂಡರು. ಸಿನಿಮಾವನ್ನು ಬೆಂಬಲಿಸಿದ ನಿರ್ಮಾಪಕರು, ಅತ್ಯುತ್ತಮ ದೃಶ್ಯಗಳನ್ನು ಕಟ್ಟಿಕೊಟ್ಟ ಛಾಯಾಗ್ರಾಹಕರು ಹಾಗೂ ಪ್ರಚಾರ ಕಾರ್ಯಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ನಾಯಕಿಯರಿಗೆ ಧನ್ಯವಾದ ಅರ್ಪಿಸಿದರು. ತಪಸ್ವಿನಿ ಪೂಣಚ್ಚ ಹಾಗೂ ರಮಿಕಾ ಶಿವು ಕೂಡ ಪ್ರೇಕ್ಷಕರನ್ನು ಪ್ರೀತಿಯಿಂದ ಚಿತ್ರಮಂದಿರಕ್ಕೆ ಆಹ್ವಾನಿಸಿದರು.




ರಂಗಾಯಣ ರಘು ಮಾತನಾಡಿ, ಪ್ರೇಮದ ಊರಲಿಯಲ್ಲಿನ ತಮ್ಮ ಪಾತ್ರ ಕಲಾವಿದನಾಗಿ ತಮಗೆ ವಿಶೇಷ ತೃಪ್ತಿ ಹಾಗೂ ನೆಮ್ಮದಿ ನೀಡಿದೆ ಎಂದು ಹೇಳಿದರು. ಕನ್ನಡದ ಮಣ್ಣಿನ ಸೊಗಡಿನೊಂದಿಗೆ ಗ್ರಾಮೀಣ ಬದುಕನ್ನು ಪ್ರತಿಬಿಂಬಿಸುವ ಕಥೆ ಇದಾಗಿದ್ದು, ಕನ್ನಡಾಭಿಮಾನಿಗಳು ಸಿನಿಮಾವನ್ನು ಖಂಡಿತವಾಗಿ ಮೆಚ್ಚಿಕೊಳ್ಳುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ವೆನಿಲ್ಲಾ ಎಂಟರ್ಟೇನ್ಮೆಂಟ್ಸ್ ಹಾಗೂ ಜಾನಕಮ್ಮ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ನಿರ್ಮಾಣವಾಗಿರುವ ಚಿತ್ರಕ್ಕೆ ಸುನಾದ್ ಗೌತಮ್ ಸಂಗೀತ, ರಾಜ್‌ಕಾಂತ್ ಎಸ್.ಕೆ ಛಾಯಾಗ್ರಹಣ ಮತ್ತು ಹರ್ಷಿತ್ ಪ್ರಭು ಸಂಕಲನ ನೀಡಿದ್ದಾರೆ. ಪ್ರೀತಿ, ಸಂಗೀತ ಮತ್ತು ಕೌಟುಂಬಿಕ ಭಾವನೆಗಳ ಸಂಗಮವಾಗಿರುವ ಪ್ರೇಮದ ಊರಲಿ ಸೆಪ್ಟೆಂಬರ್ 25ರಂದು ಬೆಳ್ಳಿತೆರೆಗೆ ಬರಲಿದೆ.

## ವೀರಭದ್ರ ದೇವರ ಇತಿಹಾಸ ಹೇಳುವ ರುದ್ರಾಭಿಷೇಕಂ ಸೆ.25ಕ್ಕೆ ತೆರೆಗೆ



ವೀರಗಾಸೆಯಂತಹ ನಾಡಿನ ಸಾಂಪ್ರದಾಯಿಕ ಕಲೆಯನ್ನು ತಲೆತಲಾಂತರಗಳಿಂದ ಉಳಿಸಿಕೊಂಡು ಬಂದಿರುವ ಕುಟುಂಬದ ಕಥೆಯೊಂದಿಗೆ ವೀರಭದ್ರ ದೇವರ ಹಿನ್ನೆಲೆಯನ್ನು ಬೆಸೆದುಕೊಂಡಿರುವ ರುದ್ರಾಭಿಷೇಕಂ ಚಿತ್ರ ಸೆಪ್ಟೆಂಬರ್ 25ರಂದು ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಫ್ಯಾನ್ ಇಂಡಿಯಾ ಕ್ರಿಯೇಶನ್ಸ್ ಬ್ಯಾನರ್‌ನಡಿ ಮೂಡಿಬಂದಿರುವ ಈ ಚಿತ್ರ 100ಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಪ್ರೇಕ್ಷಕರನ್ನು ತಲುಪಲಿದೆ. ವಸಂತ್ ಕುಮಾರ್ ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದಾರೆ.

ಚಿತ್ರದಲ್ಲಿ ವಿಜಯ ರಾಘವೇಂದ್ರ ಮತ್ತು ಪ್ರಿಯಾಂಕಾ ತಿಮ್ಮೇಶ್ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದು, ಇಬ್ಬರೂ ದ್ವಿಪಾತ್ರಗಳಲ್ಲಿ ಅಭಿನಯಿಸಿರುವುದು ವಿಶೇಷ. ವಿಜಯ ರಾಘವೇಂದ್ರ ತಂದೆ ಹಾಗೂ ಮಗನಾಗಿ ಎರಡು ವಿಭಿನ್ನ ಶೇಡ್‌ಗಳ ಪಾತ್ರ ನಿರ್ವಹಿಸಿದರೆ, ಪ್ರಿಯಾಂಕಾ ತಿಮ್ಮೇಶ್ ಹಳ್ಳಿಯ ಶಿವಭಕ್ತೆಯಾಗಿ ಹಾಗೂ ನಗರ ಹುಡುಗಿಯಾಗಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ. ಬಲ ರಾಜವಾಡಿ ಗೌಡ್ರು ಪಾತ್ರದಲ್ಲಿ ನಟಿಸಿದ್ದು, ವಿ. ಮನೋಹರ್, ಮನು, ಸನತ್, ಬುಲೆಟ್ ವಿನು, ಮಮತಾ ತುರುವೇಕೆರೆ, ನವನಿತಾ ಶೆಟ್ಟಿ, ಮಂಜುಳಾ ಸೇರಿದಂತೆ ಹಲವು ಕಲಾವಿದರು ಚಿತ್ರತಂಡದಲ್ಲಿದ್ದಾರೆ.

ಜನಪದ ಕಲೆ ಹಾಗೂ ದೈವದ ಹಿನ್ನೆಲೆಯನ್ನು ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರಿಗೆ ತಲುಪಿಸುವ ಉದ್ದೇಶದಿಂದ ಚಿತ್ರವನ್ನು ರೂಪಿಸಲಾಗಿದೆ ಎಂದು ನಿರ್ದೇಶಕ ವಸಂತ್ ಕುಮಾರ್ ತಿಳಿಸಿದ್ದಾರೆ. ಕಥೆಯ ಪ್ರಮುಖ ಕೇಂದ್ರಬಿಂದು ವೀರಭದ್ರ ದೇವರಾಗಿದ್ದು, ಅವರ ಆಗಮನದ ಹಿನ್ನೆಲೆ ಹಾಗೂ ಅದಕ್ಕೆ ಕಾರಣವಾದ ಘಟನೆಗಳನ್ನು ಸಿನಿಮಾ ತೆರೆದಿಡಲಿದೆ. ದೇವನಹಳ್ಳಿ ಸುತ್ತಮುತ್ತಲಿನ ಪ್ರದೇಶಗಳ ಜತೆಗೆ ಗೋಕರ್ಣ, ಹೊನ್ನಾವರ, ಕುಮಟಾ, ಅಬ್ಬಕ್ಕ ಫೋರ್ಟ್ ಹಾಗೂ ಅಘನಾಶಿನಿ ಹಿನ್ನೀರಿನ ವಿಭಿನ್ನ ತಾಣಗಳಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗಿದೆ.

ಮಂಜುನಾಥ ಕೆ.ಎನ್., ಎನ್. ಜಯರಾಮಪ್ಪ, ಕೆ. ವೆಂಕಟೇಶ್, ಬಿ. ಚಿದಾನಂದ ಮೂರ್ತಿ, ಸುರೇಶ್ ಬಾಬು, ಬಿ.ಕೆ. ಅಶ್ವಥ್ ನಾರಾಯಣ, ಶಿವಕುಮಾರ್, ಕೆ.ಎಸ್. ರವಿಕುಮಾರ್ ಹಾಗೂ ಕುಸುಮ ವಸಂತ್ ಕುಮಾರ್ ಸೇರಿದಂತೆ ಒಂಬತ್ತು ಮಂದಿ ನಿರ್ಮಾಪಕರು ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ವಿ. ಮನೋಹರ್ ಸಂಗೀತ ಸಂಯೋಜಿಸಿದ್ದು, ಮುತ್ತುರಾಜ್ ಛಾಯಾಗ್ರಹಣ ನಿರ್ವಹಿಸಿದ್ದಾರೆ. ಜನಪದ ಪರಂಪರೆ, ದೈವಿಕ ಹಿನ್ನೆಲೆ ಹಾಗೂ ಕೌಟುಂಬಿಕ ಕಥಾಹಂದರದೊಂದಿಗೆ ಮೂಡಿಬಂದಿರುವ ರುದ್ರಾಭಿಷೇಕಂ ಸೆ.25ರಂದು ತೆರೆಗೆ ಬರಲು ಸಜ್ಜಾಗಿದೆ.

## ನಿರಂಜನ್ ಸುಧೀಂದ್ರಪ್ರೇಮ್ ಕಾಂಬಿನೇಷನ್‌ನ ಸ್ಪಾರ್ಕ್

ಇದೇ ಸೆಪ್ಟೆಂಬರ್ 25ರಂದು ರಾಜ್ಯಾದ್ಯಂತ ತೆರೆಗೆ ಬರಲು ಸಜ್ಜಾಗಿರುವ ಸ್ಪಾರ್ಕ್ ಸಿನಿಮಾ ಬಿಡುಗಡೆಗೆ ಮುನ್ನವೇ ಕುತೂಹಲ ಮೂಡಿಸಿದೆ. ನಿರಂಜನ್ ಸುಧೀಂದ್ರ ನಾಯಕನಾಗಿ ನಟಿಸಿರುವ ಈ ಚಿತ್ರದ ಟ್ರೈಲರ್ ಇತ್ತೀಚೆಗಷ್ಟೇ ಗದಗದಲ್ಲಿ ಉಪೇಂದ್ರ ಅವರಿಂದ ಬಿಡುಗಡೆಯಾಗಿದ್ದು, ಗಮನ ಸೆಳೆದಿದೆ. ಇದೀಗ ಬೆಂಗಳೂರಿನಲ್ಲಿ ಮಾಧ್ಯಮಗಳಿಗಾಗಿ ಟ್ರೈಲರ್ ಪ್ರದರ್ಶಿಸಿದ ಚಿತ್ರತಂಡ, ಚಿತ್ರದ ಮತ್ತೊಂದು ಪ್ರಮುಖ ಆಕರ್ಷಣೆಯಾಗಿರುವ ನವನಟ ಅಭಯ್ ವಸಿಷ್ಠ ಅವರನ್ನು ಪರಿಚಯಿಸಿತು. ಗರೀಮಾಅವಿನಾಶ್ ವಸಿಷ್ಠ ದಂಪತಿ ನಿರ್ಮಿಸಿರುವ ಸ್ಪಾರ್ಕ್‌ನಲ್ಲಿ ಅವರ ಪುತ್ರ ಅಭಯ್ ವಸಿಷ್ಠ ಖಳನಟನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ವಿದೇಶದಲ್ಲಿ ಹುಟ್ಟಿ ಬೆಳೆದಿರುವ ಅಭಯ್ ವಸಿಷ್ಠ ಅವರಿಗೆ ಕನ್ನಡ ಭಾಷೆಯ ಪರಿಚಯ ಸದ್ಯಕ್ಕೆ ಕಡಿಮೆ. ವಿದೇಶಿ ರಂಗಭೂಮಿಯಲ್ಲಿ ಅನುಭವ ಹೊಂದಿರುವ ಅವರು, ಕನ್ನಡ ಚಿತ್ರರಂಗದ ವಾತಾವರಣ ವಿಭಿನ್ನವಾಗಿದೆ ಎನ್ನುತ್ತಾರೆ. ನಾಯಕನಾಗಿ ಪರಿಚಯವಾಗುವ ಅವಕಾಶವಿದ್ದರೂ ಸದ್ಯ ಖಳನಟನ ಪಾತ್ರವನ್ನು ಆಯ್ಕೆ ಮಾಡಿಕೊಂಡಿರುವ ಬಗ್ಗೆ ಮಾತನಾಡಿದ ಅಭಯ್, ಈ ಪಾತ್ರ ತಮಗೆ ತುಂಬಾ ಇಷ್ಟವಾಗಿದ್ದರಿಂದ ಒಪ್ಪಿಕೊಂಡಿರುವುದಾಗಿ ಹೇಳಿದರು. ಮುಂದಿನ ದಿನಗಳಲ್ಲಿ ಕನ್ನಡ ಭಾಷೆ ಹಾಗೂ ಇಲ್ಲಿನ ಸಿನಿಮಾರಂಗದ ಬಗ್ಗೆ ಹೆಚ್ಚಿನ ಜ್ಞಾನ ಪಡೆದುಕೊಂಡು ಕನ್ನಡದಲ್ಲಿ ನಾಯಕನಾಗಿ ನಟಿಸುವ ಕನಸಿದೆ ಎಂದು ತಿಳಿಸಿದರು. ನಾಯಕ ನಿರಂಜನ್ ಸುಧೀಂದ್ರ ಕೂಡ ಅಭಯ್ ಅವರ ಅಭಿನಯವನ್ನು ಮೆಚ್ಚಿಕೊಂಡಿದ್ದು, ಆ್ಯಕ್ಷನ್ ದೃಶ್ಯಗಳಲ್ಲಿ ಅವರ ಎತ್ತರ ಹಾಗೂ ದೇಹದಾರ್ಢ್ಯ ಪಾತ್ರಕ್ಕೆ ಉತ್ತಮವಾಗಿ ಹೊಂದಿಕೆಯಾಗಿದೆ ಎಂದರು. ವಿದೇಶದಿಂದ ಬಂದಿದ್ದರೂ ಅಭಯ್ ಉತ್ತಮವಾಗಿ ನಟಿಸಿದ್ದು, ಪ್ರೇಕ್ಷಕರಿಗೆ ಪರದೆಯ ಮೇಲೆ ಒಬ್ಬ ಪ್ರತಿಭಾವಂತ ಕಲಾವಿದನ ಪರಿಚಯವಾಗಲಿದೆ ಎಂದು ಹೇಳಿದರು.

ಸ್ಪಾರ್ಕ್ ಭ್ರಷ್ಟಾಚಾರದ ವಿರುದ್ಧದ ಕಥೆಯನ್ನು ಹೊಂದಿದ್ದರೂ, ಚಿತ್ರವನ್ನು ಸಂಪೂರ್ಣ ಮನರಂಜನೆಯೊಂದಿಗೆ ಕಟ್ಟಿಕೊಡಲಾಗಿದೆ ಎಂದು ನಿರಂಜನ್ ಸುಧೀಂದ್ರ ಹೇಳಿದರು. ತಮ್ಮ ಪಾತ್ರ ಸೇರಿದಂತೆ ಸಿನಿಮಾದ ಒಟ್ಟಾರೆ ಕಥೆ ನೋಡಿದಾಗ ಇದು ತಮ್ಮ ವೃತ್ತಿಜೀವನದಲ್ಲಿ ಮಹತ್ವದ ಯಶಸ್ಸು ತಂದುಕೊಡಲಿದೆ ಎಂಬ ವಿಶ್ವಾಸ ಮೂಡಿದೆ ಎಂದರು. ನಿರ್ದೇಶಕ ಮಹಾಂತೇಶ್ ಹಂದ್ರಾಳ್ ಮಾತನಾಡಿ, ಸಿನಿಮಾ ಮಾಡಲು ತಮಗೆ ಬೇಕಾದ ಕಲಾವಿದರನ್ನು ನಿರ್ಮಾಪಕರು ಯಾವುದೇ ಕೊರತೆಯಿಲ್ಲದೆ ಒದಗಿಸಿ ಸಂಪೂರ್ಣ ಸಹಕಾರ ನೀಡಿದ್ದಾರೆ. ಆ ಬೆಂಬಲದಿಂದಲೇ ಸಿನಿಮಾ ಉತ್ತಮವಾಗಿ ಮೂಡಿಬಂದಿದೆ ಎಂದು ತಿಳಿಸಿದರು. ಇದೇ ಮೊದಲ ಬಾರಿಗೆ ಖಳನಟನ ಪಾತ್ರದಲ್ಲಿ ಕಾಣಿಸಿಕೊಂಡಿರುವ ಲವ್ಲಿ ಸ್ಟಾರ್ ಪ್ರೇಮ್, ಹೊಸಬರ ಸಿನಿಮಾವನ್ನು ಆಯ್ಕೆ ಮಾಡಿಕೊಂಡಿರುವ ನಿರ್ಮಾಪಕರ ಪ್ರಯತ್ನವನ್ನು ಶ್ಲಾಘಿಸಿದರು. ಚಿತ್ರದಲ್ಲಿ ಭ್ರಷ್ಟ ಪೊಲೀಸ್ ಅಧಿಕಾರಿಯ ಪಾತ್ರ ನಿರ್ವಹಿಸಿದ್ದು, ಪಾತ್ರಕ್ಕೆ ಸ್ಟೈಲಿಷ್ ಲುಕ್ ನೀಡಲು ಪ್ರಯತ್ನಿಸಿರುವುದಾಗಿ ಹೇಳಿದರು.

ಹಾಸ್ಯನಟ ಧರ್ಮಣ್ಣ ಕಡೂರು ಅವರ ಪ್ರಕಾರ, ಸ್ಪಾರ್ಕ್‌ನಲ್ಲಿ ನಿರಂಜನ್ ಸುಧೀಂದ್ರ ಮತ್ತು ಪ್ರೇಮ್ ಪ್ರಮುಖ ಆಕರ್ಷಣೆಗಳಾಗಿದ್ದಾರೆ. ನಿರಂಜನ್ ಜೊತೆ ತಾವೂ ಪತ್ರಕರ್ತನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ತಮ್ಮ ಪಾತ್ರದ ಮೂಲಕ ಪ್ರೇಕ್ಷಕರನ್ನು ನಗಿಸುವ ವಿಶ್ವಾಸ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯಕಾರಿ ನಿರ್ಮಾಪಕ ವಿಶ್ವಾಸ್ ಎಂ. ನಾಯರ್ ಸೇರಿದಂತೆ ಚಿತ್ರತಂಡದ ಪ್ರಮುಖರು ಉಪಸ್ಥಿತರಿದ್ದರು. ಗರೀಮಾಅವಿನಾಶ್ ವಸಿಷ್ಠ ನಿರ್ಮಾಣದ ಈ ಚಿತ್ರಕ್ಕೆ ಮಹಾಂತೇಶ್ ಹಂದ್ರಾಳ್ ನಿರ್ದೇಶನವಿದ್ದು, ಸೆಪ್ಟೆಂಬರ್ 25ರಂದು ಸ್ಪಾರ್ಕ್ ಪ್ರೇಕ್ಷಕರ ಮುಂದೆ ಬರಲಿದೆ.



## ಸಾಮಾನ್ಯನೊಬ್ಬ ಸಿಎಂ ಆದರೆ ಆಡಳಿತ ಹೇಗಿರುತ್ತೆ?

## ಕಾಮನ್ ಮ್ಯಾನ್ ಟ್ರೈಲರ್‌ನಲ್ಲಿ ಕುತೂಹಲ

ಸಾಮಾನ್ಯ ವ್ಯಕ್ತಿಯೊಬ್ಬ ರಾಜ್ಯದ ಮುಖ್ಯಮಂತ್ರಿಯಾದರೆ ಆಡಳಿತದಲ್ಲಿ ಯಾವ ರೀತಿಯ ಬದಲಾವಣೆಗಳನ್ನು ತರಬಹುದು, ಜನರಿಗಾಗಿ ಏನೆಲ್ಲಾ ಸುಧಾರಣೆಗಳನ್ನು ಕೈಗೊಳ್ಳಬಹುದು ಹಾಗೂ ಅಧಿಕಾರದ ಹಾದಿಯಲ್ಲಿ ಎದುರಾಗುವ ಸವಾಲುಗಳನ್ನು ಹೇಗೆ ಎದುರಿಸಬಹುದು ಎಂಬ ಕುತೂಹಲಕಾರಿ ಕಥಾಹಂದರ ಹೊಂದಿರುವ ಕಾಮನ್ ಮ್ಯಾನ್ ಚಿತ್ರ ಸೆಪ್ಟೆಂಬರ್ 25ರಂದು ಪ್ರೇಕ್ಷಕರ ಮುಂದೆ ಬರಲು ಸಜ್ಜಾಗಿದೆ. ಇತ್ತೀಚೆಗೆ ಬಿಡುಗಡೆಯಾದ ಚಿತ್ರದ ಟ್ರೈಲರ್ ಪ್ರೇಕ್ಷಕರ ಗಮನ ಸೆಳೆಯುತ್ತಿದ್ದು, ವಿಭಿನ್ನ ಕಥಾವಸ್ತುವಿನ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ಡಾ. ಎನ್. ನರಸಿಂಹ ಮೂರ್ತಿ ಕಥೆ ಬರೆದು ಸುರಭಿ ಫಿಲಂಸ್ ಬ್ಯಾನರ್ ಅಡಿಯಲ್ಲಿ ನಿರ್ಮಿಸಿರುವ ಈ ಚಿತ್ರಕ್ಕೆ ಹಿರಿಯ ನಿರ್ದೇಶಕ ಓಂ ಸಾಯಿ ಪ್ರಕಾಶ್ ಆಕ್ಷನ್ ಕಟ್ ಹೇಳಿದ್ದಾರೆ. ಇದು ಅವರ ನಿರ್ದೇಶನದ 106ನೇ ಚಿತ್ರವಾಗಿದೆ.

ಕೆರೆಬೇಟೆ ಖ್ಯಾತಿಯ ಗೌರಿಶಂಕರ್ ನಾಯಕನಾಗಿ ನಟಿಸಿದ್ದು, ಸೋನಾ ಲದ್ವಾ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಟ್ರೈಲರ್ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಸಂಗೀತ ನಿರ್ದೇಶಕ ವಿ. ಮನೋಹರ್, ಚಿತ್ರದ ಪರಿಕಲ್ಪನೆ ಹಾಗೂ ಟ್ರೈಲರ್‌ನಲ್ಲಿರುವ ಅಂಶಗಳು ಸಹಜವಾಗಿಯೇ ಕುತೂಹಲ ಮೂಡಿಸುತ್ತವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸಾಮಾನ್ಯ ಪ್ರಜೆಯೊಬ್ಬ ವಿಧಾನಸೌಧದ ಮೇಲೆ ನನಗೂ ಹಕ್ಕಿದೆ, ಅದನ್ನು ನನಗೆ ಬರೆದುಕೊಡಿ ಎಂದು ಕೇಳುವ ಸನ್ನಿವೇಶವೇ ಚಿತ್ರದ ವಿಭಿನ್ನತೆಯನ್ನು ತೋರಿಸುತ್ತದೆ ಎಂದ ಅವರು, ಸಿನಿಮಾ ಯಶಸ್ಸು ಕಾಣಲಿ ಎಂದು ಚಿತ್ರತಂಡಕ್ಕೆ ಶುಭ ಹಾರೈಸಿದರು.




ನಟ ಬಲ ರಾಜ್ ವಾಡಿ ನಾಯಕನ ತಂದೆ ಹಾಗೂ ರಂಗಭೂಮಿ ಕಲಾವಿದನ ಪಾತ್ರದಲ್ಲಿ ನಟಿಸಿರುವುದಾಗಿ ತಿಳಿಸಿದರು. ನಿರ್ಮಾಪಕರ ಅಳಿಯ ಹಾಗೂ ನಟ ಕಿರಣ್, ಚಿತ್ರದಲ್ಲಿ ಮುಖ್ಯಮಂತ್ರಿಯ ಮಗನ ಪಾತ್ರ ನಿರ್ವಹಿಸಿರುವುದಾಗಿ ಹೇಳಿದರು. ನಿರ್ಮಾಪಕ ಡಾ. ಎನ್. ನರಸಿಂಹ ಮೂರ್ತಿ, ನಿರ್ದೇಶಕ ಓಂ ಸಾಯಿ ಪ್ರಕಾಶ್ ಅವರು ಚಿತ್ರವನ್ನು ಅಚ್ಚುಕಟ್ಟಾಗಿ ರೂಪಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿ, ಪ್ರೇಕ್ಷಕರು ಸೆಪ್ಟೆಂಬರ್ 25ರಂದು ಚಿತ್ರಮಂದಿರಕ್ಕೆ ಬಂದು ಚಿತ್ರವನ್ನು ಬೆಂಬಲಿಸುವಂತೆ ಮನವಿ ಮಾಡಿದರು. ಚಿತ್ರ ಈಗಾಗಲೇ ಹಿಂದಿ, ತಮಿಳು ಹಾಗೂ ತೆಲುಗು ಭಾಷೆಗಳಿಗೆ ಡಬ್ ಆಗಿದ್ದು, ಕನ್ನಡ ಬಿಡುಗಡೆಯ ಫಲಿತಾಂಶದ ಆಧಾರದ ಮೇಲೆ ಇತರ ಭಾಷೆಗಳಲ್ಲಿ ಬಿಡುಗಡೆ ಮಾಡುವ ಯೋಜನೆಯಿದೆ ಎಂದು ತಿಳಿಸಿದರು.

ಚಿತ್ರದ ನಾಯಕ ಗೌರಿಶಂಕರ್, ಪ್ರತಿಯೊಬ್ಬ ಮನುಷ್ಯನಲ್ಲೂ ಒಂದು ಕನಸು ಅಥವಾ ಆಸೆ ಇರುತ್ತದೆ; ಅದೇ ರೀತಿ ಒಬ್ಬ ಸಾಮಾನ್ಯ ವ್ಯಕ್ತಿ ಮುಖ್ಯಮಂತ್ರಿ ಸ್ಥಾನಕ್ಕೇರಿದರೆ ಏನು ಬದಲಾವಣೆ ತರಬಹುದು ಎಂಬುದನ್ನು ಸಿನಿಮಾದಲ್ಲಿ ಹೇಳಲಾಗಿದೆ ಎಂದರು. ಹಿರಿಯ ನಟ ಅಶೋಕ್ ರಾಜ್ಯಪಾಲರ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ರಮೇಶ್ ಭಟ್, ಗಣೇಶರಾವ್ ಕೇಸರಕರ್, ಎಸ್ಕಾರ್ಟ್ ಶ್ರೀನಿವಾಸ್, ಪ್ರಕಾಶ್ ತುಮ್ಮಿನಾಡು ಸೇರಿದಂತೆ ಹಲವು ಕಲಾವಿದರು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ವಿನಯ ಚಂದ್ರ ಸಂಗೀತ, ಜೆ.ಜಿ. ಕೃಷ್ಣ ಮತ್ತು ದೀಪಕ್ ಕುಮಾರ್ ಛಾಯಾಗ್ರಹಣ, ಥ್ರಿಲ್ಲರ್ ಮಂಜು ಸಾಹಸ ನಿರ್ದೇಶನ ಚಿತ್ರಕ್ಕಿದೆ. ಚೈತ್ರಾ ಆಚಾರ್, ಕೈಲಾಶ್ ಖೇರ್ ಹಾಗೂ ಬಾಬಾ ಸೈಗಲ್ ಹಾಡುಗಳಿಗೆ ಧ್ವನಿ ನೀಡಿದ್ದಾರೆ.

## ಹೆಗ್ಗಣ ಮುದ್ದು ರಿಲೀಸ್

### ಡಾಲಿ ಧನಂಜಯ್, ಅರುಣ್ ಸಾಗರ್ ಮಗಳು ಅದಿತಿ ನಟಿಸಿರೋ ಚಿತ್ರ ತೆರೆ ಮೇಲೆ ಯಾವಾಗ?

ನಟ ಡಾಲಿ ಧನಂಜಯ್ ಬೆಂಬಲದ ಬಹುನಿರೀಕ್ಷಿತ ಹೆಗ್ಗಣ ಮುದ್ದು ಸಿನಿಮಾ ಸೆಪ್ಟೆಂಬರ್ 25ರ ಶುಕ್ರವಾರದಂದು ರಾಜ್ಯಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿದೆ. ಇತ್ತ ರಾಜಧಾನಿ ಬೆಂಗಳೂರಿನ ಸಿನೆಪ್ರಿಯರು ಈಗಾಗಲೇ ಶೋ ಟೈಮಿಂಗ್ಸ್‌ಗಾಗಿ ಕಣ್ಣಿಟ್ಟಿದ್ದು, ಬುಕ್‌ಮೈಶೋ ಹಾಗೂ ಪೇಟಿಎಮ್‌ಗಳಲ್ಲಿ ಸಿನಿಮಾ ಲಿಸ್ಟಿಂಗ್ ಆಗಿದೆ. ಆದರೆ, ಸೆಪ್ಟೆಂಬರ್ 23ರ ಬುಧವಾರ ಮಧ್ಯಾಹ್ನದ ವೇಳೆಗೆ ಅಡ್ವಾನ್ಸ್ ಬುಕಿಂಗ್ ಇನ್ನು ಪೂರ್ಣವಾಗಿ ಓಪನ್ ಆಗಬೇಕಿತ್ತು. ಯುಎ 16+ ಸೆನ್ಸಾರ್ ಪ್ರಮಾಣಪತ್ರ ಪಡೆದಿರುವ ಈ ಚಿತ್ರವು ಒಟ್ಟು 2 ಗಂಟೆ 29 ನಿಮಿಷಗಳ ರನ್ ಟೈಮ್ ಹೊಂದಿದೆ. ಸದ್ಯ ರಿಲೀಸ್ ಆಗಿರುವ ಚಿತ್ರದ ಟ್ರೇಲರ್ ಕನ್ನಡ ನೆಟ್ಟಿಗರ ಗಮನ ಸೆಳೆಯುತ್ತಿದ್ದು, ಸೋಷಿಯಲ್ ಮೀಡಿಯಾದಲ್ಲಿ ಸಖತ್ ಟ್ರೆಂಡಿಂಗ್‌ನಲ್ಲಿದೆ.

ನಿರ್ಮಾಪಕ ಡಾಲಿ ಧನಂಜಯ್ ಪಾಲಿಗೆ ಈ ಸಿನಿಮಾ ಅತ್ಯಂತ ವಿಶೇಷವಾಗಿದೆ. ಕಾರಣ, ಇತ್ತೀಚೆಗಷ್ಟೇ ಅವರು ಚಿತ್ರನಿರ್ಮಾಣದಿಂದ ಕೊಂಚ ವಿರಾಮ ತೆಗೆದುಕೊಳ್ಳುವ ಸುಳಿವು ನೀಡಿದ್ದರು. ಮುಂದೆ ಹೆಗ್ಗಣ ಮುದ್ದು ಸಿನಿಮಾ ಬರಲಿದೆ. ಬಹುಶಃ ಇದುವೇ ನನ್ನ ನಿರ್ಮಾಣದ ಕೊನೆಯ ಸಿನಿಮಾವಾಗಬಹುದು ಎಂದು ಧನಂಜಯ್ ಹೇಳಿದ್ದರು. ಕೆವಿಎನ್ ಪ್ರೊಡಕ್ಷನ್ಸ್ ಮೂಲಕ ಚಿತ್ರ ವಿತರಣೆಯಾಗುತ್ತಿದ್ದು, ರಾಜ್ಯಾದ್ಯಂತ ಮಲ್ಟಿಪ್ಲೆಕ್ಸ್ ಹಾಗೂ ಸಿಂಗಲ್ ಸ್ಕ್ರೀನ್‌ಗಳಲ್ಲಿ ಅದ್ದೂರಿಯಾಗಿ ರಿಲೀಸ್ ಮಾಡಲು ಪ್ಲಾನ್ ಮಾಡಲಾಗಿದೆ. ನವಬರಹಗಾರ ಅವಿನಾಶ್ ಬಾಳೆಕಲ ನಿರ್ದೇಶನದ ಈ ಚಿತ್ರದಲ್ಲಿ ಪೂರ್ಣಚಂದ್ರ ಮೈಸೂರು ಮತ್ತು ಅದಿತಿ ಸಾಗರ್ ಮುಖ್ಯ ಭೂಮಿಕೆಯಲ್ಲಿ ನಟಿಸಿದ್ದಾರೆ.

ಬುಧವಾರ ಮಧ್ಯಾಹ್ನದ ವೇಳೆಗೆ ಬೆಂಗಳೂರಿನಲ್ಲಿ ಶೋಗಳ ವಿವರ ಇನ್ನು ಪೂರ್ಣವಾಗಿ ಅಪ್‌ಡೇಟ್ ಆಗಿರಲಿಲ್ಲ. ಬುಕ್‌ಮೈಶೋನಲ್ಲಿ ಐ ಆ್ಯಮ್ ಇನ್ ಟ್ರೈಸ್ಟೇಟೆಡ್ ಆಪ್ಷನ್ ಸಕ್ರಿಯವಾಗಿದ್ದರೂ, ಟಿಕೆಟ್ ಬುಕಿಂಗ್ ಇನ್ನು ಪೂರ್ಣ ಪ್ರಮಾಣದಲ್ಲಿ ಶುರುವಾಗಿಲ್ಲ. ಪಿವಿಆರ್ ಐನಾಕ್ಸ್, ಸಿನೆಪೊಲಿಸ್ ಹಾಗೂ ಗಾಂಧಿನಗರ ಮತ್ತು ಉತ್ತರ ಬೆಂಗಳೂರಿನ ಪ್ರಮುಖ ಸಿಂಗಲ್ ಸ್ಕ್ರೀನ್‌ಗಳಲ್ಲಿ ಶೀಘ್ರದಲ್ಲೇ ಬುಕಿಂಗ್ ಆರಂಭವಾಗುವ ಸಾಧ್ಯತೆಯಿದೆ. ಇನ್ನು ಮೈಸೂರು ಹಾಗೂ ಹುಬ್ಬಳ್ಳಿ ಭಾಗದ ಪ್ರೇಕ್ಷಕರು ಶುಕ್ರವಾರದ ಶೋಗಳಿಗಾಗಿ ಬುಕಿಂಗ್ ಆಪ್‌ಗಳನ್ನು ಚೆಕ್ ಮಾಡುತ್ತಿರಬಹುದು. ಪೇಟಿಎಮ್‌ನಲ್ಲೂ ಟಿಕೆಟ್ ಅಪ್‌ಡೇಟ್‌ಗಳನ್ನು ಗಮನಿಸುತ್ತಿರಿ.

**ಹೆಗ್ಗಣ ಮುದ್ದು ಟ್ರೇಲರ್ ಹೈಪ್, ಸೆನ್ಸಾರ್ ಮತ್ತು ರನ್ ಟೈಮ್**

ನವದಂಪತಿಗಳ ಸುತ್ತ ಹೆಣೆದಿರುವ ಈ ಕಾಮಿಡಿ-ಥ್ರಿಲ್ಲರ್ ಕಥಾಹಂದರದ ಟ್ರೇಲರ್‌ನಲ್ಲಿ ಕುಟುಂಬದ ಹಾಸ್ಯವು ರಹಸ್ಯ ಹಾಗೂ ಅನುಮಾನಗಳಿಗೆ ತಿರುಗುವುದು ಕುತೂಹಲ ಮೂಡಿಸಿದೆ. ಚಿತ್ರದ ಹಡಗು ಹಾಡು ಮತ್ತು ನಾಯಕಿಯಾಗಿ ಅದಿತಿ ಸಾಗರ್ ಅವರ ಪೂರ್ಣಪ್ರಮಾಣದ ಅಭಿನಯದ ಬಗ್ಗೆ ಸಿನಿರಸಿಕರಲ್ಲಿ ಈಗಾಗಲೇ ಉತ್ತಮ ಮಾತುಗಳು ಕೇಳಿಬರುತ್ತಿವೆ. ಚಿತ್ರಕ್ಕೆ ಯುಎ 16+ ಸರ್ಟಿಫಿಕೇಟ್ ಸಿಕ್ಕಿದ್ದು, ಕುಟುಂಬ ಸಮೇತರಾಗಿ ಹಾಗೂ ಯುವಕರು ವೀಕ್ಷಿಸಲು ಸೂಕ್ತವಾಗಿದೆ. ಒಟ್ಟು 149 ನಿಮಿಷಗಳ (2 ಗಂಟೆ 29 ನಿಮಿಷ) ಅವಧಿಯ ಈ ಚಿತ್ರಕ್ಕೆ ಪ್ರಮುಖ ಕನ್ನಡ ಚಿತ್ರಮಂದಿರಗಳಲ್ಲಿ ಸಂಜೆಯ ಶೋಗಳಿಗೆ ಹೆಚ್ಚಿನ ಬೇಡಿಕೆ ಸಿಗುವ ನಿರೀಕ್ಷೆಯಿದೆ.

**ಶುಕ್ರವಾರದ ಬಾಕ್ಸ್ ಆಫೀಸ್ ರೇಸ್: ಇತರ ಸಿನಿಮಾಗಳ ಪೈಪೋಟಿ**

ಸೆಪ್ಟೆಂಬರ್ 25ರಂದು ಹೆಗ್ಗಣ ಮುದ್ದು ಜೊತೆಗೆ ಕಾಮನ್ ಮ್ಯಾನ್ ಮತ್ತು ಸ್ಪಾರ್ಕ್ ನಂತಹ ಇತರ ಕನ್ನಡ ಸಿನಿಮಾಗಳು ಹಾಗೂ ಬಹುಭಾಷಾ ಚಿತ್ರಗಳು ಬಿಡುಗಡೆಯಾಗುತ್ತಿದ್ದು, ಸಂಜೆಯ ಶೋಗಳಿಗಾಗಿ ಭಾರೀ ಪೈಪೋಟಿ ಏರ್ಪಡಲಿದೆ. ಕೋರಮಂಗಲ, ವೈಟ್‌ಫೀಲ್ಡ್ ಹಾಗೂ ಮಲ್ಲೇಶ್ವರಂನಂತಹ ಪ್ರಮುಖ ಏರಿಯಾಗಳಲ್ಲಿ ಟಿಕೆಟ್ ಓಪನ್ ಆದ ತಕ್ಷಣವೇ ಬುಕ್ ಮಾಡಿಕೊಳ್ಳುವುದು ಒಳಿತು. ಶುಕ್ರವಾರ ಮಧ್ಯಾಹ್ನದ ವೇಳೆಗೆ ರಾಜಧಾನಿಯಲ್ಲಿ ಸಿನಿಮಾ ಒಳ್ಳೆಯ ರೆಸ್ಪಾನ್ಸ್ ಪಡೆದುಕೊಂಡರೆ, ಕೆವಿಎನ್ ಸಂಸ್ಥೆಯ ಬಲದಿಂದ ಎರಡನೇ ಹಂತದ ನಗರಗಳಲ್ಲೂ ಚಿತ್ರಕ್ಕೆ ಹೆಚ್ಚಿನ ಸ್ಕ್ರೀನ್‌ಗಳು ಸಿಗುವ ಸಾಧ್ಯತೆಯಿದೆ.




## 11 ವರ್ಷದ ಬಳಿಕ ಚಂದನವನಕ್ಕೆ ಎಂಟ್ರಿ ಕೊಟ್ಟ ರಣವಿಕ್ರಮ ಬೆಡಗಿ ಅದಾ ಡಿವೈನ್ ಲುಕ್ ವೈರಲ್!



ಪುನೀತ್ ರಾಜಕುಮಾರ್ ಅಭಿನಯದ ರಣವಿಕ್ರಮ ಸಿನಿಮಾದಲ್ಲಿ ನಾಯಕಿಯಾಗಿ ಬಾಲಿವುಡ್ ನಟಿ ಅದಾ ಶರ್ಮಾ ನಟಿಸಿದ್ದರು. ಇದೀಗ ಬರೋಬ್ಬರಿ 11 ವರ್ಷಗಳ ಬಳಿಕ, ಅದಾ ಶರ್ಮಾ ಮತ್ತೊಂದು ಕನ್ನಡ ಸಿನಿಮಾ ಮೂಲಕ ಎಂಟ್ರಿ ಕೊಟ್ಟಿದ್ದು, ನಟಿಯ ಫಸ್ಟ್ ಲುಕ್ ಇದೀಗ ವೈರಲ್ ಆಗಿದೆ.

**ಕನ್ನಡಕ್ಕೆ ಮತ್ತೆ ಎಂಟ್ರಿ ಕೊಟ್ಟ ರಣವಿಕ್ರಮ ಬೆಡಗಿ:** ಪುನೀತ್ ರಾಜಕುಮಾರ್ ಅಭಿನಯದ ಬ್ಲಾಕ್ ಬಸ್ಟರ್ ಸಿನಿಮಾ, ರಣವಿಕ್ರಮ. ಈ ಸಿನಿಮಾದಲ್ಲಿ ಅಪ್ಪುವಿಗೆ ನಾಯಕಿಯಾಗಿ ಬಾಲಿವುಡ್ ಬ್ಯೂಟಿ ಅದಾ ಶರ್ಮಾ ನಟಿಸಿದ್ದರು. ಈ ಸಿನಿಮಾ ಬಿಡುಗಡೆಯಾಗಿ ಇದೀಗ 11 ವರ್ಷ ಕಳೆದಿದ್ದು, ಸುದೀರ್ಘ ಸಮಯದ ಬಳಿಕ ಇದೀಗ ನಟಿ ಮತ್ತೆ ಕನ್ನಡ ಚಿತ್ರರಂಗಕ್ಕೆ ಮತ್ತೆ ಎಂಟ್ರಿ ಕೊಟ್ಟಿದ್ದಾರೆ. ಚಂದನವನದಲ್ಲಿ ಸದ್ಯ ಭಾರಿ ಕುತೂಹಲ ಮೂಡಿಸಿರುವ ಸಿನಿಮಾದಲ್ಲಿ ನಟಿಸುವ ಮೂಲಕ ನಟಿ ಗ್ರ್ಯಾಂಡ್ ಎಂಟ್ರಿ ಕೊಟ್ಟಿದ್ದಾರೆ.

**ರಾಮರಸ ಸಿನಿಮಾದಲ್ಲಿ ಅದಾ ಶರ್ಮಾ:** ಸ್ಯಾಂಡಲ್‌ವುಡ್‌ನ ಬಹುನಿರೀಕ್ಷಿತ ಚಿತ್ರ ರಾಮರಸ ತಮ್ಮ ಸಂಪೂರ್ಣ ಚಿತ್ರೀಕರಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ್ದು, ಸದ್ಯ ಪೋಸ್ಟ್-ಪ್ರೊಡಕ್ಷನ್ ಹಂತಕ್ಕೆ ಕಾಲಿಟ್ಟಿದೆ. ಈ ಸಂದರ್ಭದಲ್ಲಿ ಸಿನಿಮಾದಲ್ಲಿ ಮುಖ್ಯ ಪಾತ್ರಗಳನ್ನು ರಿವೀಲ್ ಮಾಡುತ್ತಿದ್ದಾರೆ. ಇದೀಗ ಚಿತ್ರತಂಗ ನಟಿ ಅದಾ ಶರ್ಮಾ ಅವರ ಪೋಸ್ಟರ್, ಫಸ್ಟ್ ಲುಕ್ ರಿವೀಲ್ ಮಾಡಿದ್ದು, ನಟಿ ಡಿವೈನ್ ಲುಕ್‌ನಲ್ಲಿ ಅದ್ಭುತವಾಗಿ ಕಾಣಿಸಿಕೊಂಡಿದ್ದಾರೆ.

**ಚಿತ್ರತಂಡ ಹಂಚಿಕೊಂಡ ಪೋಸ್ಟ್‌ನಲ್ಲಿ ಏನಿದೆ?:** ಇಡೀ ಸೃಷ್ಟಿಯೇ ಪರಾಶಕ್ತಿಯ ಲೀಲೆ. ಹಾಲುಣಿಸುವವಳೂ ತಾಯಿ. ಮಣ್ಣು ಮುಕ್ಕಿಸುವವಳೂ ತಾಯಿ. ಆದರೆ ಹಾಲು ಯಾವುದು, ಮಣ್ಣು ಯಾವುದು ಅನ್ನುವದರ ಅರಿವು ಪಡೆಯುವುದೇ ಇಡೀ ಬದುಕಿನ ಮಾಯೆ. ದಶ ಮಹಾವಿದ್ಯೆಯ ಸಾರವ ಪರಿಚಯಿಸಲು ತಾಯಿ ರಾಮರಸದಲ್ಲಿ ಯಾವ ರೂಪ ತಾಳಿ ಬರಲಿದ್ದಾಳೆ? ಅದನ್ನು ನೋಡಿಯೇ ಸವಿಯಬೇಕು.. ಎಂದು ಚಿತ್ರರಂಗ ಬರೆದುಕೊಂಡಿದ್ದು, ಅದಾ ಶರ್ಮಾ ತ್ರಿಶೂಲ್ ಹಿಡಿದಿರುವ ರೌದ್ರ ರೂಪದ ದೇವಿಯಾಗಿ ಕಾಣಿಸಿಕೊಂಡಿದ್ದಾರೆ. ಸದ್ಯ ಎಲ್ಲೆಡೆ ಈ ಪೋಸ್ಟರ್ ವೈರಲ್ ಆಗುತ್ತಿದೆ. ಅದಾ ಶರ್ಮಾ ಯಾವ ದೇವಿಯ ಪಾತ್ರದಲ್ಲಿ ನಟಿಸುತ್ತಿದ್ದಾರೆ ಅನ್ನೋದು ಇನ್ನಷ್ಟೇ ರಿವೀಲ್ ಆಗಬೇಕಿದೆ.

**ರಾಮರಸ ಚಿತ್ರದಲ್ಲಿ ತಾರೆಯರ ದಂಡು:** ಬಿಎಂ ಗಿರೀಶ್ ನಿರ್ದೇಶನದ, ಗುರು ದೇಶಪಾಂಡೆ ಮತ್ತು ವಿಕ್ರಂ ಆರ್ಯ ನಿರ್ಮಾಣದ ಈ ಚಿತ್ರದಲ್ಲಿ ಡೈನಾಮಿಕ್ ಪ್ರಿನ್ಸ್ ಪ್ರಜ್ವಲ್ ದೇವರಾಜ್, ಬಿಗ್ ಬಾಸ್ ವಿನ್ನರ್ ಕಾರ್ತಿಕ್ ಮಹೇಶ್, ನಟಿ ಹೆಬ್ಬಾ ಪಟೇಲ್ ಸೇರಿ ಹಲವಾರು ತಾರೆಯರ ದಂಡೆ ಇದೆ. ಈ ಚಿತ್ರಕ್ಕೆ ಬಿ.ಜೆ.ಭರತ್ ಮ್ಯೂಸಿಕ್ ಮಾಡಿದ್ದಾರೆ. ವಿ.ನಾಗೇಂದ್ರ ಪ್ರಸಾದ್, ನಾಗಾರ್ಜುನ್ ಶರ್ಮಾ ಸಾಹಿತ್ಯ ಬರೆದಿದ್ದಾರೆ. ಸಿನಿಮಾ ಯಾವಾಗ ರಿಲೀಸ್ ಆಗಲಿದೆ ಎನ್ನುವ ಬಗ್ಗೆ ಮಾಹಿತಿ ಇಲ್ಲ.

# ಜಮೀನು ಸ್ವಾಧೀನಕ್ಕೆ ಮುಂದಾದ ಅರಣ್ಯ ಇಲಾಖೆ

## ಹೊನ್ನಮಾರನಹಳ್ಳಿ ಗ್ರಾಮದ ನೂರಕ್ಕೂ ಹೆಚ್ಚು ಸಾಗುವಳಿದಾರ ರೈತರ ಆಕ್ರೋಶ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ತಾಲ್ಲೂಕಿನ ನುಗ್ಗೇಹಳ್ಳಿ ಹೋಬಳಿ ಹೊನ್ನಮಾರನ ಹಳ್ಳಿ ಗ್ರಾಮದ ಸರ್ವೆ ನಂಬರ್ 7 ರಲ್ಲಿ ಗ್ರಾಮದ ನೂರಕ್ಕೂ ಹೆಚ್ಚು ಸಾಗುವಳಿದಾರ ರೈತರಿಗೆ ಕಳೆದ 30 ವರ್ಷಗಳ ಹಿಂದೆ ಜಮೀನು ಮಂಜೂರಾಗಿದೆ. ಇದೀಗ ಇದು ಅರಣ್ಯ ಇಲಾಖೆ ಮೀಸಲು ಜಾಗವೆಂದು ಅರಣ್ಯ ಅಧಿಕಾರಿಗಳು ಸ್ವಾಧೀನಕ್ಕೆ ಮುಂದಾಗಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಶಾಸಕರ ಸೂಚನೆಯ ಮೇರೆಗೆ ತಹಶೀಲ್ದಾರ್, ಭೂಮಾಪನ ಇಲಾಖೆ ಮತ್ತು ಅರಣ್ಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಜಾಗ ಪರಿಶೀಲಿಸಿ ಗ್ರಾಮಸ್ಥರ ಅಹವಾಲು ಸ್ವೀಕರಿಸಿದರು.



ಹೊನ್ನಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 7ರಲ್ಲಿನ 95 ಎಕರೆ ಜಾಗವನ್ನು 1998-99ನೇ ಸಾಲಿನಲ್ಲಿ ಗ್ರಾಮದ ನೂರು ರೈತರಿಗೆ ಅಂದಿನ ಸರ್ಕಾರದಿಂದ ಜಮೀನು ಮಂಜೂರಾಗಿತ್ತು. ಕಳೆದ 30 ವರ್ಷಗಳಿಂದ ಉಳುಮೆ ಮಾಡುತ್ತಾ ಬಂದಿರುವ ಶೇ.70ರಷ್ಟು ರೈತರಿಗೆ ಭೂಮಿ ಖಾತೆ ಆಗಿದೆ. ಇನ್ನೂ ಕೆಲವರಿಗೆ ಖಾತೆ ಆಗದೇ ಸರ್ಕಾರದಿಂದ ಬರುವ ಸೌಲಭ್ಯ ಪಡೆಯಲು ವಂಚಿತರಾಗಿದ್ದಾರೆ. ಇದರಿಂದ ಕಂದಾಯ ಇಲಾಖೆ ಕೆಲ ರೈತರಿಗೆ ಖಾತೆ ಮಾಡಿಕೊಟ್ಟು ಇನ್ನುಳಿದವರಿಗೆ ಖಾತೆ ಮಾಡದೇ ಅನ್ಯಾಯವೆಸಗಿದೆ ಎಂದು ರೈತರು ದೂರುತ್ತಿದ್ದಾರೆ.

ಈ ಕುರಿತಾಗಿ ಹಿಂದಿನ ಕಂದಾಯ ಸಚಿವರಾಗಿದ್ದ ಕೃಷ್ಣ ಬೈರೇಗೌಡರಿಗೆ ರೈತರು ದೂರು ನೀಡಲಾಗಿ ಏನು ಉಪಯೋಗವಾಗದ ಹಿನ್ನಲೆಯಲ್ಲಿ ಇತ್ತೀಚೆಗೆ ನಡೆದ ಪ್ರಜಾ ಅಂದೋಲನದಲ್ಲಿ ಗ್ರಾಮಸ್ಥರು ಶಾಸಕರ ಗಮನಕ್ಕೆ ತಂದಾಗ ಅಧಿಕಾರಿಗಳು ಗ್ರಾಮಕ್ಕೆ ಆಗಮಿಸಿ ಪರಿಶೀಲಿಸುವ ಭರವಸೆ ನೀಡಿದ ಹಿನ್ನಲೆಯಲ್ಲಿ ಗುರುವಾರ ತಹಶೀಲ್ದಾರ್, ಅರಣ್ಯ ಇಲಾಖೆ ಮತ್ತು ಸರ್ವೆ ಇಲಾಖೆಯ ಅಧಿಕಾರಿಗಳು ಗ್ರಾಮಕ್ಕೆ ಭೇಟಿ ನೀಡಿ ಸರ್ವೆ ನಂಬರ್ 7ರ ವ್ಯಾಪ್ತಿಯಲ್ಲಿ ಬರುವ ಜಮೀನಿನ ಸ್ಥಳಕ್ಕೆ ಭೇಟಿ ನೀಡಿ ರೈತರಿಂದ ಮಾಹಿತಿ ಪಡೆದು ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ತಹಶೀಲ್ದಾರ್ ಶಂಕರಪ್ಪ ಮಾತನಾಡಿ ಗ್ರಾಮದ ರೈತರು ಹೇಳುವಂತೆ 1998-99ನೇ ಸಾಲಿನಲ್ಲಿ ಗ್ರಾಮದ ರೈತರಿಗೆ ಜಮೀನು ಮಂಜೂರಾಗಿದೆ. ಒಟ್ಟು ಈ ವ್ಯಾಪ್ತಿಯಲ್ಲಿ ಸುಮಾರು 95 ಎಕರೆ ಸರ್ಕಾರಿ ಗೋಮಾಳವಿದೆ. ಇದರಲ್ಲಿ 2002ನೇ ಇಸವಿಯಲ್ಲಿ ಅರಣ್ಯ ಇಲಾಖೆಗೆ ಸುಮಾರು 68 ಎಕರೆ ಮೀಸಲು ಅರಣ್ಯಕ್ಕೆ ಡಿ ನೋಟಿಫಿಕೇಶನ್ ಆಗಿದ್ದು ಇದರಿಂದ

> ★ ರಾಯಸಮುದ್ರ, ಕಾವಲು ಪ್ರದೇಶದಲ್ಲಿ ಅರಣ್ಯ ಇಲಾಖೆಗೆ 60 ಎಕರೆ ಜಾಗ ಮೀಸಲಾಗಿದೆ. ಅಧಿಕಾರಿಗಳು ಆ ಜಾಗದ ಬದಲಿಗೆ ನಮಗೆ ಮಂಜೂರು ಆಗಿರುವ ಜಾಗದ ಸ್ವಾಧೀನಕ್ಕೆ ಬಂದಿದ್ದಾರೆ. ಈ ಕುರಿತಾಗಿ ತಹಶೀಲ್ದಾರ್, ಜಿಲ್ಲಾಧಿ ಕಾರಿ ಪರಿಶೀಲನೆ ನಡೆಸಿ ನಮ್ಮ ಬದುಕಿಗೆ ಆಸರೆಯಾಗಬೇಕು.
>
> – ಗ್ರಾಮಸ್ಥರು

ಈ ಗೊಂದಲ ಉಂಟಾಗಿದೆ. ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಮತ್ತು ಅರಣ್ಯ ಇಲಾಖೆ ಅಧಿಕಾರಿಗಳಿಗೆ ರೈತರ ಸಮಸ್ಯೆ ಕುರಿತು ಲಿಖಿತ ರೂಪದಲ್ಲಿ ಮಾಹಿತಿ ನೀಡಲಾಗುತ್ತದೆ. ಜೊತೆಗೆ ಶೀಘ್ರ ಅರಣ್ಯ ಇಲಾಖೆ ಮತ್ತು ಸರ್ವೆ ಇಲಾಖೆ ವತಿಯಿಂದ ಜಂಟಿ ಸರ್ವೆ ಕಾರ್ಯ ನಡೆಸಿ ರೈತರ ಮತ್ತು ಅರಣ್ಯ ಇಲಾಖೆಯ ಜಮೀನುಗಳಿಗೆ ಸ್ಥಳ ಸೂಚಿಸಲಾಗುತ್ತದೆ ಎಂದರು.

ಹೋಬಳಿ ಕಂದಾಯ ಅಧಿಕಾರಿ ಲತೇಶ್ ಈ ಬಗ್ಗೆ ಮಾಹಿತಿ ನೀಡಿ 15 ದಿನಗಳ ಒಳಗೆ ಸರ್ವೆ ಇಲಾಖೆಯ ಮೂಲಕ ದಶಕಗಳ ಸಮಸ್ಯೆಯಾಗಿರುವ ರೈತರ ಜಮೀನನ್ನು ಗುರುತಿಸುವ ಕಾರ್ಯ ನಡೆಯುತ್ತದೆ. ಸಂಪೂರ್ಣ ಸರ್ವೆಯಾದ ನಂತರ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಲಾಗುತ್ತದೆ ಎಂದರು.

ಗ್ರಾಮದ ಮುಖಂಡರಾದ ಎಚ್.ಬಿ. ರಂಗಸ್ವಾಮಿ, ರೈತ ವಿಜಯ್‌ಕುಮಾರ್, ಅಂಗಡಿ ಸುರೇಶ್, ಮಧು ಅವರು ಮಾತನಾಡಿ, ಸರ್ವೆ ನಂಬರ್ 7ರಲ್ಲಿ 1998 -99ನೇ ಸಾಲಿನಲ್ಲಿ ಗ್ರಾಮದ 80 ರೈತರಿಗೆ ಜಮೀನು ಮಂಜೂರಾಗಿದೆ. ಇದರಲ್ಲಿ 70 ರೈತರಿಗೆ ಕಂದಾಯ ಇಲಾಖೆಯಿಂದ ಖಾತೆಯಾಗಿ ಆರ್‌ಟಿಸಿ ಬರುತ್ತಿದೆ. ಆದರೆ ಉಳಿದಿರುವ 10 ರೈತರಿಗೆ 2010ರಲ್ಲಿ ಮೀಸಲು ಅರಣ್ಯ ಎಂದು ಅರಣ್ಯ ಇಲಾಖೆ ನೋಟಿಸ್ ನೀಡಿದೆ. ಅನ್ಯಾಯವಾಗಿರುವ ರೈತರಿಗೆ ಉಳುಮೆ ಮಾಡುತ್ತಿರುವ ಜಮೀನನ್ನು ಖಾತೆ ಮಾಡಿಕೊಡುವಂತೆ ತಹಶೀಲ್ದಾರ್‌ಗೆ ಗ್ರಾಮಸ್ಥರು ಒತ್ತಾಯಿಸಿದ್ದೇವೆ ಎಂದರು.

ಅರಣ್ಯ ಇಲಾಖೆ ಅಧಿಕಾರಿ ಜ್ಯೋತಿ, ಸರ್ವೆ ಇಲಾಖೆಯ ಮೇಲ್ವಿಚಾರಕ ಷಡಕ್ಷರಿ, ಮಾಜಿ ಗ್ರಾಪಂ ಅಧ್ಯಕ್ಷ ವಿಠ್ಠಲ್ ಕುಮಾರ್ ಇದ್ದರು.

# ಹಿಂದೂ ಕಾರ್ಯಕರ್ತರಿಗೆ ಕಿರುಕುಳ: ಪ್ರತಿಭಟನೆ

## ಸಂಘಟನೆಗಳಿಂದ ರಾಜ್ಯಪಾಲರಿಗೆ ಮನವಿ

• ಪ್ರಜೋದಯ ವರದಿ

**ಸಕಲೇಶಪುರ:** ಹಿಂದೂ ಕಾರ್ಯಕರ್ತರ ವಿರುದ್ಧ ವಿವಿಧ ಕಾಯ್ದೆಗಳಡಿ ಪ್ರಕರಣ ದಾಖಲಿಸಿ ಸಂಘಟನೆಗಳಿಗೆ ಕಿರುಕುಳ ನೀಡುವ ಮೂಲಕ ಹತ್ತಿಕ್ಕುವ ಪ್ರಯತ್ನ ನಡೆಯುತ್ತಿದೆ ಹಾಗೂ ಪ್ರಜಾಸೇವಾ ಆಂದೋಲನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಅಧಿಕಾರಿಗಳಿಗೆ ಲಂಚ ನೀಡುವ ಕುರಿತು ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಿ ಹಿಂದೂ ಹಿತರಕ್ಷಣಾ ವೇದಿಕೆ ಕಾರ್ಯಕರ್ತರು ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು.




ಬಳಿಕ ಉಪ ವಿಭಾಗಾಧಿಕಾರಿಗಳ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ತಾಲೂಕು ಕಚೇರಿ ಎದುರು ನಡೆದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಪ್ರತಿಭಟನಾಕಾರರು, ಹಿಂದೂ ಕಾರ್ಯಕರ್ತರು ಹಾಗೂ ಸಂಘಟನೆಗಳನ್ನು ಗುರಿಯಾಗಿಸಿಕೊಂಡು ಕೋಕಾ, ಗೂಂಡಾ ಕಾಯ್ದೆ ಸೇರಿದಂತೆ ವಿವಿಧ ಕಾನೂನುಗಳಡಿ ಪ್ರಕರಣ ದಾಖಲಿಸಲಾಗುತ್ತಿದೆ ಎಂದು ಆರೋಪಿಸಿದರು.

ಸೆ.19ರಂದು ನಡೆದ ಪ್ರಜಾಸೇವಾ ಆಂದೋಲನದಲ್ಲಿ ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ. ಶಿವಲಿಂಗೇಗೌಡ ಅವರ ಅಧಿಕಾರಿಗಳಿಗೆ ಗೌರವಯುತವಾಗಿ ಕೊಡುವುದು ಧರ್ಮ ಎಂಬ ಹೇಳಿಕೆ ವಿವಾದಕ್ಕೆ ಕಾರಣವಾಗಿದ್ದು, ಈ ಕುರಿತು ಸಮಗ್ರ ತನಿಖೆ ನಡೆಸುವಂತೆ ರಾಜ್ಯಪಾಲರಿಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು.

ಸಚಿವ ಕೆ.ಎಂ. ಶಿವಲಿಂಗೇಗೌಡ ಅವರನ್ನು ಹಾಸನ ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದಿಂದ ಬದಲಾಯಿಸಿ, ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ವೇದಿಕೆ ಆಗ್ರಹಿಸಿತು. ಅಲ್ಲದೆ, ಗೃಹ ಸಚಿವ ಪ್ರಿಯಾಂಕ್ ಖರ್ಗೆ ಅವರು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಲಾಯಿತು. ಸಚಿವ ಶಿವಲಿಂಗೇಗೌಡ ಅವರು ನಂತರ ತಮ್ಮ ಹೇಳಿಕೆಗೆ ಸ್ಪಷ್ಟನೆ ನೀಡಿ, ಅಧಿಕಾರಿಗಳಿಗೆ ಹಣ ನೀಡುವಂತೆ ತಾವು ಹೇಳಿಲ್ಲ; ಗೌರವಯುತವಾಗಿ ನಡೆದುಕೊಳ್ಳುವಂತೆ ಮಾತ್ರ ತಿಳಿಸಿದ್ದಾಗಿ ಹೇಳಿದ್ದಾರೆ.

ಪ್ರತಿಭಟನೆಯಲ್ಲಿ ಹಿಂದೂ ಮುಖಂಡ ರಘು, ಹಿಂದೂ ಹಿತರಕ್ಷಣಾ ವೇದಿಕೆಯ ಸಂಯೋಜಕ ಶಿವು ಜಿಪ್ಪಿ, ಕೌಶಿಕ್ ಎಚ್.ಎಂ., ಜಿತ್‌ಗೌಡ, ವಿಜಿತ್‌ಗೌಡ, ಶೇಖರ್ ಪೂಜಾರಿ, ದಿಲೀಪ್ ಕುಶಾಲನಗರ, ಸುಪ್ರೀತ್, ಹರ್ಷ, ಕಬ್ಬಿನಗದ್ದೆ ಶೇಖರ್, ಹೆಬ್ಬಸಾಲೆ ರವಿ, ಮಹೇಶ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಜಿಲ್ಲಾ ಮಟ್ಟದ ಕ್ರೀಡಾಕೂಟ: ರಾಜ್ಯಮಟ್ಟಕ್ಕೆ ಇಬ್ಬರ ಆಯ್ಕೆ

• ಪ್ರಜೋದಯ ವರದಿ





**ಸಕಲೇಶಪುರ:** ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ ಹಾಸನ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಅಚೀವರ್ಸ್ ಪ್ರಜ್ಞಾ ಪದವಿ ಪೂರ್ವ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳು ಉತ್ತಮ ಪ್ರದರ್ಶನ ನೀಡಿ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಆಯ್ಕೆಯಾಗಿದ್ದಾರೆ.

ಕಾಲೇಜಿನ ಕ್ರಿಸ್ಟನ್ ಡಿ ಸಿಲ್ವಾ ಅವರು 110 ಮೀಟರ್ ಹರ್ಡಲ್ಸ್ ಹಾಗೂ ಮೊಹಮ್ಮದ್ ಶಿಯಾನ್ ಅವರು 100 ಮೀಟರ್ ಓಟ ಸ್ಪರ್ಧೆಯಲ್ಲಿ ಗಮನಾರ್ಹ ಪ್ರದರ್ಶನ ನೀಡಿ ರಾಜ್ಯಮಟ್ಟಕ್ಕೆ ಅರ್ಹತೆ ಪಡೆದಿದ್ದಾರೆ. ಇಬ್ಬರೂ ತಾಲೂಕು ಮಟ್ಟದ ಕ್ರೀಡಾಕೂಟದಲ್ಲಿಯೂ ಉತ್ತಮ ಪ್ರದರ್ಶನ ನೀಡಿ ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದರು.

ಅಚೀವರ್ಸ್ ಪ್ರಜ್ಞಾ ಪದವಿ ಪೂರ್ವ ಕಾಲೇಜು ಕ್ರೀಡಾ ಕ್ಷೇತ್ರದಲ್ಲಿ ನಿರಂತರ ಸಾಧನೆ ಮಾಡುತ್ತಿದ್ದು, ಸತತವಾಗಿ ಮೂರು ವರ್ಷಗಳಿಂದ ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಪಡೆಯುತ್ತಾ ಬಂದಿದೆ. ಇದೀಗ ಇಬ್ಬರು ವಿದ್ಯಾರ್ಥಿಗಳು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುವುದು ಕಾಲೇಜಿನ ಕ್ರೀಡಾ ಸಾಧನೆಗೆ ಮತ್ತೊಂದು ಗರಿಮೆ ತಂದಿದೆ.

ವಿದ್ಯಾರ್ಥಿಗಳ ಸಾಧನೆಗೆ ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದು, ರಾಜ್ಯ ಮಟ್ಟದಲ್ಲಿಯೂ ಉತ್ತಮ ಪ್ರದರ್ಶನ ನೀಡುವಂತೆ ಶುಭ ಹಾರೈಸಿದ್ದಾರೆ.

# ವಿದ್ಯಾರ್ಥಿಗಳು ಶಿಸ್ತು, ಸೇವಾ ಮನೋಭಾವ ರೂಢಿಸಿಕೊಳ್ಳಿ

• ಪ್ರಜೋದಯ ವರದಿ

ಸಕಲೇಶಪುರ: ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆ ಹಾಸನ, ಜೆ.ಎಸ್.ಎಸ್. ಶಿಕ್ಷಣ ಮಹಾವಿದ್ಯಾಲಯ ಸಕಲೇಶಪುರ, ಲಯನ್ಸ್ ಕ್ಲಬ್ ಸಕಲೇಶಪುರ ಹಾಗೂ ಯುವ ರೆಡ್ ಕ್ರಾಸ್ ಘಟಕ ಇವರ ಸಂಯುಕ್ತ ಆಶ್ರಯದಲ್ಲಿ ಸಕಲೇಶಪುರದಲ್ಲಿ ಗುರುವಾರ ಸ್ವಯಂ ಪ್ರೇರಿತ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿತ್ತು.




ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಶಬ್ಬೀರ್ ಅಹ್ಮದ್, ಭಾರತದಲ್ಲಿ 1920ರಲ್ಲಿ ರೆಡ್ ಕ್ರಾಸ್ ಸಂಸ್ಥೆ ಅಸ್ತಿತ್ವಕ್ಕೆ ಬಂದಿದ್ದು, ಸಂಸ್ಥಾಪಕರಾದ ಜೀನ್ ಹೆನ್ರಿ ಡ್ಯೂನಾಂಟ್ ಅವರ ಮಾನವೀಯ ಸೇವಾ ಆಶಯದಂತೆ ಆರೋಗ್ಯ, ಶಿಕ್ಷಣ, ರಕ್ತದಾನ ಹಾಗೂ ಸಮಾಜ ಸೇವೆಯ ಕುರಿತು ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸಲಾಗುತ್ತಿದೆ ಎಂದರು.

ಹಾಸನ ಜಿಲ್ಲೆಯಲ್ಲಿ ರೆಡ್‌ಕ್ರಾಸ್ ಸಂಸ್ಥೆಯು ಸಕ್ರಿಯವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಕಳೆದ ಎರಡು ವರ್ಷಗಳಿಂದ ಪ್ರತಿ ಮಂಗಳವಾರ ಮತ್ತು ಶುಕ್ರವಾರ ಉಚಿತ ರೆಡ್ ಕ್ರಾಸ್ ಕ್ಲಿನಿಕ್ ಅನ್ನು ವ್ಯವಸ್ಥಿತವಾಗಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ರೆಡ್ ಕ್ರಾಸ್ ಸಂಸ್ಥೆಯ ನಿರ್ದೇಶಕ ಬಿ.ಆರ್. ಉದಯ್ ಕುಮಾರ್, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಶಿಸ್ತು ಹಾಗೂ ಸೇವಾ ಮನೋಭಾವವನ್ನು ಬೆಳೆಸಿಕೊಂಡು ಸದೃಢ ಸಮಾಜ ನಿರ್ಮಾಣಕ್ಕೆ ಕೊಡುಗೆ ನೀಡಬೇಕು ಎಂದು ಕರೆ ನೀಡಿದರು.

ರೆಡ್‌ಕ್ರಾಸ್ ಸಂಸ್ಥೆಯ ನಿರ್ದೇಶಕಿ ಕೆ.ಟಿ. ಜಯಶ್ರೀ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ರಸ್ತೆ ಅಪಘಾತಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ರಕ್ತದ ಅವಶ್ಯಕತೆಯೂ ಹೆಚ್ಚಾಗಿದೆ. ಆದ್ದರಿಂದ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಪ್ರೇರಿತರಾಗಿ ರಕ್ತದಾನಕ್ಕೆ ಮುಂದಾಗಬೇಕು ಎಂದು ಹೇಳಿದರು.

ಈ ಶಿಬಿರದಲ್ಲಿ ಒಟ್ಟು 50 ವಿದ್ಯಾರ್ಥಿ-ವಿದ್ಯಾರ್ಥಿನಿಯರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ರಕ್ತದಾನ ಮಾಡಿದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಜಿಲ್ಲಾ ಶಾಖೆಯ ವತಿಯಿಂದ ಕೀಚೈನ್‌ಗಳನ್ನು ಹಾಗೂ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತ ಮಾಸ್ಕ್‌ಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲ ಡಾ ನಂಜುಡಪ್ಪ ವಹಿಸಿದ್ದರು. ಕಾರ್ಯಕ್ರಮದಲ್ಲಿ ತಾಲ್ಲೂಕು ರೆಡ್‌ಕ್ರಾಸ್ ಸಭಾಪತಿ ಶಾರದ ಗುರುಮೂರ್ತಿ, ಕಾರ್ಯದರ್ಶಿ ರೇಖಾ ಸುರೇಶ್, ಭೀಮರಾಜ್, ಲಯನ್ಸ್ ಕ್ಲಬ್ ಸಕಲೇಶಪುರದ ಪದಾಧಿಕಾರಿಗಳು, ಯುವ ರೆಡ್‌ಕ್ರಾಸ್ ಘಟಕದ ಸಂಯೋಜಕ ಡಾ.ದಿನೇಶ್ ಎಂ.ಕೆ., ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

# ಎತ್ತಿನಗಾಡಿಯಲ್ಲಿ ಗಣಪತಿ ಮೆರವಣಿಗೆ

## ಹಳೆ ಹಗರೆಯಲ್ಲಿ ಗ್ರಾಮೀಣ ಸಂಸ್ಕೃತಿ, ಸಂಪ್ರದಾಯದ ಅನಾವರಣ

• ಪ್ರಜೋದಯ ವರದಿ

**ಬೇಲೂರು:** ಇತ್ತೀಚಿನ ದಿನಗಳಲ್ಲಿ ಗಣಪತಿ ವಿಸರ್ಜನಾ ಮೆರವಣಿಗೆಗಳಲ್ಲಿ ಟ್ರ್ಯಾಕ್ಟರ್, ಲಾರಿ, ಕ್ರೇನ್‌ಗಳ ಅಬ್ಬರ ಹೆಚ್ಚಾಗಿರುವ ನಡುವೆಯೇ, ತಾಲ್ಲೂಕಿನ ಹಳೆ ಹಗರೆ ಗ್ರಾಮದಲ್ಲಿ ಎತ್ತಿನ ಗಾಡಿಯಲ್ಲಿ ಗಣಪತಿ ಮೂರ್ತಿಯನ್ನು ಮೆರವಣಿಗೆ ನಡೆಸುವ ಮೂಲಕ ಗ್ರಾಮಸ್ಥರು ಗ್ರಾಮೀಣ ಸಂಸ್ಕೃತಿ ಹಾಗು ಸಾಂಪ್ರದಾಯಿಕ ವೈಭವವನ್ನು ಎತ್ತಿ ಹಿಡಿದಿದ್ದಾರೆ.



ಹಳೆಯ ಸಂಪ್ರದಾಯವನ್ನು ಉಳಿಸಿ ಬೆಳೆಸುವ ಉದ್ದೇಶದಿಂದ ಎತ್ತಿನಗಾಡಿಯಲ್ಲಿ ಗಣಪತಿ ಮೂರ್ತಿಯನ್ನು ಕೂರಿಸಿ, ಹೂವುಗಳು, ಹಸಿರು ತೋರಣಗಳಿಂದ ಗಾಡಿಯನ್ನು ಆಕರ್ಷಕವಾಗಿ ಅಲಂಕರಿಸಿ ಮೆರವಣಿಗೆ ನಡೆಸಲಾಯಿತು. ಆಧುನಿಕ ಧ್ವನಿವರ್ಧಕಗಳ ಅಬ್ಬರದ ನಡುವೆ ಸಾಂಪ್ರದಾಯಿಕ ರೀತಿಯಲ್ಲಿ ನಡೆದ ಮೆರವಣಿಗೆ ಗ್ರಾಮಸ್ಥರ ಗಮನ ಸೆಳೆಯಿತು.

ಗ್ರಾಮದ ಪ್ರತಿ ಮನೆಯ ಮುಂದೆಯೂ ರಂಗೋಲಿ ಬಿಡಿಸಿ, ಎತ್ತಿನಗಾಡಿಯಲ್ಲಿ ಆಗಮಿಸಿದ ಗಣಪತಿಗೆ ಪೂಜೆ ಸಲ್ಲಿಸಿ ಮಂಗಳಾರತಿ ನೆರವೇರಿಸಲಾಯಿತು. ಭಕ್ತಿಭಾವದಿಂದ ನಡೆದ ಮೆರವಣಿಗೆಯಲ್ಲಿ ಗ್ರಾಮಸ್ಥರು ಪಾಲ್ಗೊಂಡು ಸಂಭ್ರಮಿಸಿದರು.

ಹಳೆಯ ಸಂಪ್ರದಾಯವನ್ನು ಉಳಿಸುವುದರ ಜೊತೆಗೆ ಪರಿಸರ ಸ್ನೇಹಿ ರೀತಿಯಲ್ಲಿ ಗಣಪತಿ ಮೆರವಣಿಗೆ ನಡೆಸುವ ಮೂಲಕ ಗ್ರಾಮಸ್ಥರು ಗ್ರಾಮೀಣ ಸಂಸ್ಕೃತಿಯ ಮಹತ್ವವನ್ನು ಸಾರಿದರು.

# ಹೆತ್ತೂರಿನಲ್ಲಿ ಅದ್ದೂರಿ ಗಣಪತಿ ವಿಸರ್ಜನೆ

• ಪ್ರಜೋದಯ ವರದಿ

**ಹೆತ್ತೂರು:** ಗ್ರಾಮದ ಗ್ರಾಮ ಪಂಚಾಯಿತಿ ಆವರಣದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಮಹಾಗಣಪತಿಯನ್ನು ಗುರುವಾರ ನೂರಾರು ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ವಿಸರ್ಜಿಸಲಾಯಿತು.



ಗುರುವಾರ ಗಣಪತಿ ವಿಸರ್ಜನಾ ಕಾರ್ಯಕ್ರಮದ ಅಂಗವಾಗಿ ಪ್ರತಿಷ್ಠಾಪನಾ ಆವರಣದಲ್ಲಿ ಗಣಪತಿ ಹೋಮ ಹಾಗೂ ಬೃಹತ್ ಅನ್ನದಾನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಭಕ್ತಾಧಿಗಳು ಹೋಮದಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಿದರು. ಸಂಜೆ ನಡೆದ ಗಣಪತಿ ವಿಸರ್ಜನಾ ಕಾರ್ಯಕ್ರಮದಲ್ಲಿ ಗ್ರಾಮದ ಮುಖ್ಯ ರಸ್ತೆಯಿಂದ ಹೊರಟ ಮೆರವಣಿಗೆ ಗ್ರಾಮದ ಕುಮಾರ ಲಿಂಗೇಶ್ವರ, ಮಲ್ಲೇಶ್ವರ ದೇವಸ್ಥಾನ, ಬಸವನಗುಡಿ ಅಂಬೇಡ್ಕರ್ ರಸ್ತೆ ಮೂಲಕ ಹಾದು ಹೋಗಿ ವಿದ್ಯಾನಗರದಲ್ಲಿರುವ ಐಗೂರು ರಸ್ತೆಯ ಸಂತೆಕೆರೆಗೆ ಮೇಲಿಂದ ಕ್ರೇನ್ ಮುಖಾಂತರ ಗಣಪತಿಯನ್ನು ವಿಸರ್ಜಿಸಲಾಯಿತು.

ಮೆರವಣಿಗೆಯಲ್ಲಿ ಚಂಡೆ ವಾದ್ಯ, ಮಲೆನಾಡು ಕರಡಿ ವಾದ್ಯ, ಡ್ರಂ ವಾದ್ಯಗಳು ನೋಡುಗರಿಗೆ ಆಕರ್ಷಣೆ ತಂದಿತು.

ಗಣಪತಿ ಮೂರ್ತಿಗೆ 200 ಕೆ.ಜಿ. ಹೂವಿನ ಹಾರವನ್ನು ಜೆಸಿಬಿ ಮೂಲಕ ಪುಷ್ಪಾರ್ಚನೆ ಮಾಡಲಾಯಿತು. ಮಹಿಳೆಯ ವಿಶೇಷ ಆರತಿ ಮಾಡಿದರು. ಯಶಸ್ವಿ ನೃತ್ಯ ಶಾಲೆಯ ಮಕ್ಕಳು ನೃತ್ಯ ಕಾರ್ಯಕ್ರಮ ನೆಡಸಿಕೊಟ್ಟಿದ್ದು ವಿಶೇಷವಾಗಿತ್ತು. ಡಿಜೆ ವಾದ್ಯಕ್ಕೆ ಯುವಕರು ಮಾತ್ರವಲ್ಲದೆ ಮಹಿಳೆಯರು ಮತ್ತು ಮಕ್ಕಳು ಸಹ ಕುಣಿದು ಕುಪ್ಪಳಿಸಿದರು. ಎಲ್ಲಿ ನೋಡಿದರೂ ಕೇಸರಿ ಬಾವುಟಗಳು ಕಾಣುತ್ತಿದ್ದವು ಯಾವುದೆ ರೀತಿಯ ಅಹಿತಕರ ಘಟನೆಯಾಗದಂತೆ ಯಸಳೂರು ಪೋಲಿಸ್ ಸಬ್ ಇನ್ಸ್‌ಪೆಕ್ಟರ್ ಸಲ್ಮಾನ್‌ಖಾನ್ ತಂಬೂಳಿ ಬಿಗಿಪೋಲಿಸ್ ಬಂದೋಬಸ್ತ್ ವ್ಯವಸ್ಥೆ ಮಾಡಿದ್ದರು.

ಗಣಪತಿ ಸೇವಾ ಸಮಿತಿಯ ಪದಾಧಿಕಾರಿಗಳಾದ ಹರ್ಷ, ನಾಡಗೌಡ, ನಂದೀಶ್, ಸಾಗರ್, ಜೀವನ್, ಹರ್ಷ ಎಚ್.ಎಸ್., ಹೇಮಂತ್‌ಕುಮಾರ್, ದೀಪಕ್, ಗಿರೀಶ್, ಸತೀಶ್ ಎಚ್.ಪಿ., ಸಂಚಿತ್, ಗ್ರಾಮಸ್ಥರು ಭಾಗವಹಿಸಿದ್ದರು.

# ಅರಸೀಕೆರೆ ರೈಲ್ವೆ ನಿಲ್ದಾಣಕ್ಕೆ ಸೌಲಭ್ಯ ಕಲ್ಪಿಸಲು ಮನವಿ

• ಪ್ರಜೋದಯ ವರದಿ

**ಅರಸೀಕೆರೆ:** ಕಡೂರು ಹಾಗು ಅರಸೀ ಕೆರೆ ರೈಲ್ವೆ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಅಗತ್ಯವಾದ ಮೂಲಸೌಕರ್ಯ ಕಲ್ಪಿಸಿ, ಹೊಸ ರೈಲು ಸೇವೆ ಆರಂಭಿಸುವಂತೆ ಆಗ್ರಹಿಸಿ ನೈರುತ್ಯ ರೈಲ್ವೆ ಬಳಕೆದಾರರ ಸಮಾಲೋಚನಾ ಸಮಿತಿಯ ಸದಸ್ಯ ಬಿ.ವೈ.ಉಮೇಶ್ ಅವರು ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಅನಿಲ್ ಕುಮಾರ್ ಅವರಿಗೆ ಮನವಿ ಸಲ್ಲಿಸಿದರು.



ರೈಲ್ವೆ ಅಧಿಕಾರಿಗಳನ್ನು ಭೇಟಿ ಮಾಡಿದ ಅವರು, ಕಡೂರು ರೈಲ್ವೆ ನಿಲ್ದಾಣದಿಂದ ಬೆಂಗಳೂರು, ಚಿಕ್ಕಮಗಳೂರು, ದಾವಣಗೆರೆ, ಹುಬ್ಬಳ್ಳಿ ಸೇರಿ ವಿವಿಧ ಸ್ಥಳಗಳಿಗೆ ಪ್ರತಿದಿನ ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಕರು ಸಂಚರಿಸುತ್ತಾರೆ. ಆದರೆ ನಿಲ್ದಾಣದಲ್ಲಿ ಅಗತ್ಯ ಮೂಲ ಸೌಕರ್ಯಗಳ ಕೊರತೆಯಿಂದ ಮಳೆಗಾಲ ಹಾಗು ಬೇಸಿಗೆಯಲ್ಲಿ ಪ್ರಯಾಣಿಕರು ತೊಂದರೆ ಅನುಭವಿಸುತ್ತಿದ್ದಾರೆ. ಈ ಹಿನ್ನಲೆ ಪ್ಲಾಟ್‌ಫಾರಂ ಉದ್ದಕ್ಕೂ ಮೇಲ್ಚಾವಣಿ ಅಳವಡಿಸಬೇಕು ಹಾಗು ಕುಡಿಯುವ ನೀರಿನ ವ್ಯವಸ್ಥೆಯನ್ನು ಕೂಡ ಕಲ್ಪಿಸಬೇಕು ಎಂದು ಮನವಿ ಅವರು ಮಾಡಿದರು.

ಜಿಲ್ಲೆಯ ಪ್ರಮುಖ ರೈಲ್ವೆ ನಿಲ್ದಾಣಗಳಲ್ಲಿ ಒಂದಾಗಿರುವ ಅರಸೀಕೆರೆ ನಿಲ್ದಾಣದಲ್ಲಿ ಅಮೃತ್ ಭಾರತ್ ಯೋಜನೆಯಡಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿದ್ದು, ಅವುಗಳನ್ನು ಶೀಘ್ರ ಪೂರ್ಣಗೊಳಿಸಬೇಕು. ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಬೀರೂರಿನಿಂದ ಅರಸೀಕೆರೆ ಮಾರ್ಗವಾಗಿ ಹಾಸನಕ್ಕೆ ಪ್ರತಿದಿನ ಡೆಮೋ ರೈಲು ಆರಂಭಿಸಬೇಕು ಎಂದು ಒತ್ತಾಯಿಸಿದರು.

ಅರಸೀಕೆರೆ ನಗರಸಭೆ ವ್ಯಾಪ್ತಿಯ ಮಲ್ಲೇಶ್ವರಂ, ಕಾಳನಕೊಪ್ಪಲು, ಜೇನುಕಲ್ ನಗರ ಹಾಗು ಕಾಟಿಕೆರೆ ಗ್ರಾಮಗಳಿಗೆ ತೆರಳುವ ಪ್ರಯಾಣಿಕರು ಎದುರಿಸುತ್ತಿರುವ ಸಮಸ್ಯೆ ನಿವಾರಿಸಲು ರೈಲ್ವೆ ಇಲಾಖೆ ವತಿಯಿಂದ ಮೇಲ್ಸೇತುವೆ ರಸ್ತೆ ನಿರ್ಮಿಸಬೇಕು. ಅರಸೀಕೆರೆ ರೈಲ್ವೆ ನಿಲ್ದಾಣದ ಎರಡನೇ ಮತ್ತು ಮೂರನೇ ಪ್ಲಾಟ್‌ಫಾರಂಗಳಲ್ಲಿ ಶೌಚಾಲಯ ಹಾಗು ಪ್ರಯಾಣಿಕರ ವಿಶ್ರಾಂತಿ ಕೊಠಡಿಗಳನ್ನು ನಿರ್ಮಿಸಬೇಕು ಎಂದು ಮನವಿ ಮಾಡಿದರು.

# ಇಂದು ಆಕೃತಿ ಬಟ್ಟೆ ಅಂಗಡಿ ಉದ್ಘಾಟನೆ




• ಪ್ರಜೋದಯ ವರದಿ

ಹಾಸನ: ಶ್ರೀವಾರಿ ಕಂಬೈನ್ಸ್‌ನ ಆಕೃತಿ ಬಟ್ಟೆ ಅಂಗಡಿ ಲೋಕಾರ್ಪಣೆ ಸಮಾರಂಭ ಸೆ.25ರ ಶುಕ್ರವಾರ ಬೆಳಿಗ್ಗೆ 11 ಗಂಟೆಗೆ ನಡೆಯಲಿದೆ ಎಂದು ಉದ್ಯಮಿ ಸುನಿಲ್ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿ, ಕುವೆಂಪು ನಗರದ ಉಪ ನೊಂದಣಾಧಿಕಾರಿ ಕಚೇರಿ ರಸ್ತೆಯಲ್ಲಿ ನೂತನ ಅಂಗಡಿ ತೆರೆಯಲಾಗಿದೆ. ಹಿರಿಯ ನಟ ರವಿಚಂದ್ರನ್ ಅವರು ಸಮಾರಂಭವನ್ನು ಉದ್ಘಾಟಿಸಲಿದ್ದಾರೆಂದರು.

18-80 ವರ್ಷದ ವರೆಗಿನ ಯುವತಿಯರು, ಮಹಿಳೆಯರಿಗೆ ಒಪ್ಪುವ ಕುರ್ತಿಸ್, ಚೂಡಿದಾರ, ಲೆಹೆಂಗಾಸ್, ಡ್ರೆಸ್ ಮೆಟೀರಿಯಲ್ಸ್, ಪಾಶ್ಚಿಮಾತ್ಯ ದೇಶಗಳ ಬಟ್ಟೆ, ಮಿಕ್ಸ್ ಅಂಡ್ ಮ್ಯಾಚ್, ಲೌಂಟ್ ವೇರ್, ಗಾಗ್ರಾಸ್, ಮೊದಲಾದ ನವನವೀನ ಬಣ್ಣದ ಬಟ್ಟೆಗಳು ವಿಶಾಲವಾದ ಮಳಿಗೆಯಲ್ಲಿ ಒಂದೇ ಸೂರಿನಡಿ ಕೈಗೆಟಕುವ ದರದಲ್ಲಿ ದೊರೆಯಲಿವೆ ಎಂದರು.

ನಮ್ಮ ಶೋರೂಂಗಳು ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ, ಒಡಿಸ್ಸಾ, ಸಿಂಗಾಪೂರ್ ಸೇರಿ 100ಕ್ಕೂ ಹೆಚ್ಚು ಶಾಖೆಗಳಿವೆ. ಹೆಚ್ಚು ಹೆಚ್ಚು ಗ್ರಾಹಕರು ಭೇಟಿ ನೀಡುವ ಮೂಲಕ ನಮ್ಮ ವ್ಯಾಪಾರಕ್ಕೆ ಪ್ರೋತ್ಸಾಹ ನೀಡಬೇಕೆಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಗೌತಂ, ಅರ್ಜುನ್, ಅಂಕಿತ್, ಗಜೇಂದ್ರ ಅವರು ಹಾಜರಿದ್ದರು.

# ಪುರುಷರ ಡಬಲ್ ಸ್ಕಲ್ಸ್‌ನಲ್ಲಿ ಭಾರತಕ್ಕೆ ಕಂಚು

**ನಗೋಯಾ:** ಜಪಾನ್‌ನಲ್ಲಿ ನಡೆಯುತ್ತಿರುವ ಏಷ್ಯನ್ ಕ್ರೀಡಾಕೂಟದ ಪುರುಷರ ಡಬಲ್ ಸ್ಕಲ್ಸ್ ಸ್ಪರ್ಧೆಯಲ್ಲಿ ಭಾರತದ ರೋವರ್‌ಗಳಾದ ಸತ್ನಾಮ್ ಸಿಂಗ್ ಮತ್ತು ಸಲ್ಮಾನ್ ಖಾನ್ ಕಂಚಿನ ಪದಕ ಗೆದ್ದುಕೊಂಡರು.



ನಗರಗಾವಾ ಇಂಟರ್‌ನ್ಯಾಷನಲ್ ರೆಗಟ್ಟಾ ಕೋರ್ಸ್‌ನಲ್ಲಿ ನಡೆದ ಸ್ಪರ್ಧೆಯಲ್ಲಿ ಭಾರತೀಯ ಜೋಡಿ 1,500 ಮೀಟರ್‌ವರೆಗೆ ಎರಡನೇ ಸ್ಥಾನದಲ್ಲಿತ್ತು. ಆದರೆ ಅಂತಿಮ 500 ಮೀಟರ್‌ನಲ್ಲಿ ಮೂರನೇ ಸ್ಥಾನಕ್ಕೆ ಕುಸಿಯಿತು. ಅವರು 6:13.25 ನಿಮಿಷಗಳಲ್ಲಿ ಸ್ಪರ್ಧೆ ಪೂರ್ಣಗೊಳಿಸಿದರು.

ಚೀನಾದ ಯಿ ಕ್ಸುಡಿ ಮತ್ತು ಯಿಡೆ ನೀ 6:09.37 ನಿಮಿಷಗಳಲ್ಲಿ ಸ್ಪರ್ಧೆ ಪೂರ್ಣಗೊಳಿಸಿ ಚಿನ್ನದ ಪದಕ ಗೆದ್ದರೆ, ಉಜ್ಬೇಕಿಸ್ತಾನದ ಪಾವೆಲ್ ಸೊರಿನ್ ಮತ್ತು ಮೆಖ್ರೊಜ್ಬೆಕ್ ಮಮತ್ಕುಲೋವ್ 6:10.49 ನಿಮಿಷಗಳೊಂದಿಗೆ ಬೆಳ್ಳಿ ಪದಕ ಗೆದ್ದರು.

ಭಾರತೀಯ ಜೋಡಿ ಚಿನ್ನದ ಪದಕ ವಿಜೇತರಿಗಿಂತ 3.88 ಸೆಕೆಂಡ್ ಹಿಂದುಳಿಯಿತು. ಸತ್ನಾಮ್ ಈ ಹಿಂದೆ ಹ್ಯಾಂಗ್‌ಝೌ ಏಷ್ಯನ್ ಕ್ರೀಡಾಕೂಟದ ಪುರುಷರ ಕ್ವಾಡ್ರಪಲ್ ಸ್ಕಲ್ಸ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದಿದ್ದನ್ನು ಸ್ಮರಿಸಬಹುದು.

ಇದಕ್ಕೂ ಮುನ್ನ ಪುರುಷರ ಸಿಂಗಲ್ ಸ್ಕಲ್ಸ್ ಫೈನಲ್‌ನಲ್ಲಿ ಬಲ್‌ರಾಜ್ ಪನ್ವಾರ್ 6:54.80 ನಿಮಿಷಗಳಲ್ಲಿ ಸ್ಪರ್ಧೆ ಪೂರ್ಣಗೊಳಿಸಿ ನಾಲ್ಕನೇ ಸ್ಥಾನ ಪಡೆದರು. ಇದರಿಂದ ಭಾರತ ಮತ್ತೊಂದು ರೋವಿಂಗ್ ಪದಕವನ್ನು ತಪ್ಪಿಸಿಕೊಂಡಿತು.

ಪನ್ವಾರ್ 500 ಮೀಟರ್, 1,000 ಮೀಟರ್ ಮತ್ತು 1,500 ಮೀಟರ್ ಹಂತಗಳಲ್ಲಿ ಎರಡನೇ ಸ್ಥಾನದಲ್ಲಿದ್ದರು. ಆದರೆ ಅಂತಿಮ 500 ಮೀಟರ್‌ನಲ್ಲಿ ನಾಲ್ಕನೇ ಸ್ಥಾನಕ್ಕೆ ಕುಸಿದರು. ಚೀನಾದ ಡೆಂಗ್ ಝಿವೇ 6:38.98 ನಿಮಿಷಗಳಲ್ಲಿ ಸ್ಪರ್ಧೆ ಪೂರ್ಣಗೊಳಿಸಿ ಚಿನ್ನದ ಪದಕ ಗೆದ್ದರು. ಪನ್ವಾರ್ ವಿಜೇತರಿಗಿಂತ 15.82 ಸೆಕೆಂಡ್ ಹಿಂದುಳಿದರು.

## ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ವತಿಯಿಂದ 18900 ರೈತರಿಗೆ ನೆರವು

# 15 ವರ್ಷದಲ್ಲಿ 127 ಕೋಟಿ ರೂ. ಸಾಲ ವಿತರಣೆ

• ಪ್ರಜೋದಯ ವರದಿ

**ಆಲೂರು:** ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ವತಿಯಿಂದ 18900 ರೈತರಿಗೆ 127 ಕೋಟಿ ರೂ.ಗಳ ವರೆಗೆ ಸಾಲ ನೀಡಲಾಗಿದೆ. ತನ್ನ ಅಸ್ತಿತ್ವವನ್ನು ಭದ್ರಗೊಳಿಸಿಕೊಂಡಿದೆ ಎಂದು ಅಧ್ಯಕ್ಷ ಜಗದೀಶ್ ಕಬ್ಬಿನಹಳ್ಳಿ ತಿಳಿಸಿದರು.



ಪಟ್ಟಣದಲ್ಲಿರುವ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಆವರಣದಲ್ಲಿ ಏರ್ಪಡಿಸಲಾಗಿದ್ದ, ಸಂಘದ 75 ನೆ ವಾರ್ಷಿಕೋತ್ಸವ ಅಮೃತ ಮಹೋತ್ಸವ ಉದ್ಘಾಟಿಸಿ ಮಾತನಾಡಿ, ಏಷ್ಯಾ ಖಂಡದ ಮೊದಲ ಸಹಕಾರಿ ಸಂಘದ ಸಹಕಾರ ಚಳವಳಿಯ ಆದ್ಯ ಪ್ರವರ್ತಕ, ಸ್ವಾತಂತ್ರ ಪೂರ್ವದಲ್ಲಿ ಸಹಕಾರಿ ಆಂದೋಲನಕ್ಕೆ ಕಾರಣಕರ್ತರಾದ ಧಾರವಾಡ ಜಿಲ್ಲೆ ಕಣಗಿನಹಾಳದ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲ ಅವರು ಸಹಕಾರ ಸಂಘಗಳ ಉದಯಕ್ಕೆ ಕಾರಣಕರ್ತರು. 2010-11 ರಲ್ಲಿ ತಾಲ್ಲೂಕಿನ 5800 ರೈತರಿಗೆ 13 ಕೋಟಿ ರೂ. ಸಾಲ ನೀಡಲಾಗಿದ್ದ ಪ್ರಮಾಣ ಇಂದು 127 ಕೋಟಿ ರೂ. ಗಳ ವರೆಗೆ ಮುನ್ನುಗ್ಗಿದೆ. ಮೂರು ಬಾರಿ ಸರ್ಕಾರ ಸಾಲ ಮನ್ನಾ ಮಾಡಿದೆ. ಕೇವಲ ಐದು ದಿನಗಳ ಹಿಂದೆ ಸಂಘಕ್ಕೆ 200 ರೈತರು ಶೇರುದಾರರಾಗಿ ನೊಂದಾಯಿಸಿಕೊಂಡಿರುವುದು ಸಂತಸವಾಗಿದೆ ಎಂದು ಹೇಳಿದರು.

ಇಂದಿನ ಕಲುಷಿತ ರಾಜಕಾರಣದಲ್ಲಿ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವುದು ನಮ್ಮ ಪುಣ್ಯ. ರೈತರ ಜೊತೆ ನಿರಂತರವಾಗಿ ಸಂಪರ್ಕ ಇಟ್ಟುಕೊಂಡಿರುವುದು ಸಹಕಾರ ಕ್ಷೇತ್ರ. ಮುಂದಿನ ದಿನಗಳಲ್ಲಿ ರೈತರ ಸರ್ವತೋಮುಖ ಅಭಿವೃದ್ಧಿಗಾಗಿ ಹೇಗೆ ಬೆಳೆದು ನಿಲ್ಲಬೇಕು ಎಂಬುವ ಗುರಿಯನ್ನು ಹೊಂದಲಾಗಿದೆ. 75 ವರ್ಷದಿಂದ ಈವರೆಗೆ ಕಾರ್ಯ ನಿರ್ವಹಿಸಿದ ಅಧ್ಯಕ್ಷರು, ನಿರ್ದೇಶಕರು ಸಂಘದ ಬೆಳವಣಿಗೆಗೆ ತಮ್ಮದೆ ಶ್ರಮ ವಹಿಸಿದ್ದಾರೆ. ನಾನು ಜಿಲ್ಲಾ ಸಹಕಾರ ಬ್ಯಾಂಕ್ ನಿರ್ದೇಶಕನಾದ ನಂತರ ಅಲ್ಲಿನ ಅನುಭವ ಮತ್ತು ಸವಲತ್ತುಗಳನ್ನು ಬಳಸಿಕೊಳ್ಳುವ ಮೂಲಕ ಸಂಘದ ಯಶಸ್ಸು ಸಾಗಿದೆ. ತಾಲ್ಲೂಕಿನ ಪ್ರತಿಯೊಬ್ಬ ರೈತರ ಸಮಸ್ಯೆಗೆ ಸ್ಪಂದಿಸಲು ಸಾಧ್ಯವಾಗಿದೆ ಎಂದರು.

ಸಭೆಯಲ್ಲಿ ಜಿಲ್ಲಾ ಸಹಕಾರ ಬ್ಯಾಂಕ್ ನಿರ್ದೇಶಕ ಜಯರಾಂ, ಸಿಡಿಒ ಎಂ.ಸಿ.ಶಕು, ಕೆ.ಕೆ.ಪವಿತ್ರ ಜಗದೀಶ್, ಲಿಂಗರಾಜು, ಅಜಿತ್ ಚಿಕ್ಕಕಣಗಾಲು, ಉಮೇಶ್ ಮಾತನಾಡಿದರು.

ಇದೆ ಸಂದರ್ಭದಲ್ಲಿ ಸಂಘದ ಶ್ರೇಯಸ್ಸಿಗೆ ಶ್ರಮಿಸಿದ ಮಾಜಿ ಅಧ್ಯಕ್ಷರು, ಸಿಬ್ಬಂದಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ನಿರ್ದೇಶಕರಾದ ಚಂದ್ರಶೆಟ್ಟಿ, ರುದ್ರೇಗೌಡ, ಪುಟ್ಟರಾಜೇಗೌಡ, ಆರ್.ಎಸ್. ನಟರಾಜು, ಸಿ.ಎಂ.ಶ್ರೀನಿವಾಸ್, ಸಿ.ಖ. ಅಶೋಕ್, ತೌಫಿಕ್, ಶಿವಣ್ಣ, ಎಚ್.ಬಿ.ಆನಂದ್, ದೇವರಾಜು, ಕೆ.ಕೆ.ಪವಿತ್ರ, ಎಚ್.ಟಿ.ಆಶಾ, ಮೋಹನಕುಮಾರ್, ಆಕಾಶವಾಣಿ ನಿಸರ್ಗ, ಚಂದ್ರಶೇಖರ್, ವೈ.ಎಂ. ಆಶಾ, ಅಣ್ಣಪ್ಪ, ಅಪರ್ಣ ಶೇಷಣ್ಣ, ಎ.ಬಿ.ರಘು ಹಾಜರಿದ್ದರು.

ಕರ್ನಾಟಕ ಸರ್ಕಾರ
ಪಿ.ಎಂ.ಪೋಷಣೆ ಶಕ್ತಿ ನಿರ್ಮಾಣ್ (ಮ.ಉ.ಯೋ.) ಜಿಲ್ಲಾ ಪಂಚಾಯತ್ ಕಾರ್ಯಾಲಯ, ಹಾಸನ
ಸಂಖ್ಯೆ:ಸಿ1.ಪಿ.ಎಂ.ಪೋ.ಕ.ಬಾ.ವಾ.ಟೆಂ.ಕ. 45 /2026-27
ದಿನಾಂಕ:16.09.2026

-:ಟೆಂಡರ್ ಪ್ರಕಟಣೆ:-

2026-27 ನೇ ಸಾಲಿಗೆ ಹಾಸನ ಜಿಲ್ಲೆಯ 8 ತಾಲ್ಲೂಕುಗಳ ಶಾಲೆಗಳು/ತಾಲ್ಲೂಕು ಕಛೇರಿಗಳಲ್ಲಿ ಪಿ.ಎಂ.ಪೋಷಣ್ ಶಕ್ತಿ ನಿರ್ವಾಣ್ (ಮ.ಉ.ಯೋ) ಅನುಷ್ಠಾನದ ಪರಿಶೀಲನೆ/ತಪಾಸಣೆಗೆ ಮಾಸಿಕ ಬಾಡಿಗೆ ಆಧಾರದ ಮೇಲೆ ವಾಹನವನ್ನು (ಕಾರು) ಒದಗಿಸಲು ವಾರ್ಷಿಕವಾಗಿ ರೂ.4,20,000.00 (ರೂ.ನಾಲ್ಕು ಲಕ್ಷದ ಇಪ್ಪತ್ತು ಸಾವಿರ ಮಾತ್ರ) ಒಳಗಾಗಿ ಅಲ್ಪಾವಧಿ ಮ್ಯಾನ್ಯೂಯಲ್ ಟೆಂಡರ್ ಕರೆಯಲಾಗಿದೆ. ವಿವರಗಳು ಈ ಕೆಳಕಂಡಂತಿರುತ್ತದೆ. ಟೆಂಡರ್ ಅರ್ಜಿಗಳ ವಿತರಣೆ ಆರಂಭ 23-09-2026 ರ ಪೂರ್ವಾಹ್ನ 10.00 ಗಂಟೆಯಿಂದ. ಟೆಂಡರ್ ಅರ್ಜಿ ಭರ್ತಿ ಮಾಡಿ ಸಲ್ಲಿಸಲು ಕಡೇ ದಿನಾಂಕ 07-10-2026 ರ ಅಪರಾಹ್ನ 5.30 ಗಂಟೆಗೆ, ಕಛೇರಿ ಕೆಲಸದ ವೇಳೆಯಲ್ಲಿ. ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ 08-10-2026 ರ ಪೂರ್ವಾಹ್ನ 11.00 ಗಂಟೆಗೆ ಆರ್ಥಿಕ ಬಿಡ್ ತೆರೆಯುವ ದಿನಾಂಕ 14-10-2026 ರ ಪೂರ್ವಾಹ್ನ 11.00 ಗಂಟೆಗೆ ಅರ್ಜಿ ಶುಲ್ಕ (ಹಿಂದಿರುಗಿಸಲಾಗುವುದಿಲ್ಲ) 500-00 ಪ್ರತಿ ಅರ್ಜಿಗೆ ಇ.ಎಂ.ಡಿ. ಹಣ ರೂ.15,000/- (ಹದಿನೈದು ಸಾವಿರ ರೂ.ಗಳು ಮಾತ್ರ) ಟೆಂಡರ್ ಅರ್ಜಿ ತೆರೆಯುವ ಸ್ಥಳ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳ ಕಛೇರಿ, ಜಿ.ಪಂ.ಹಾಸನ. ಅರ್ಜಿ ನಮೂನೆ ಹಾಗೂ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸ ಬೇಕಾದ ವಿಳಾಸ, ದೂರವಾಣಿ ಸಂಖ್ಯೆ : ಶಿಕ್ಷಣಾಧಿಕಾರಿಗಳು, ಪಿ.ಎಂ.ಪೋಷಣ್ ಶಕ್ತಿ ನಿರ್ಮಾಣ್ (ಮ.ಉ.ಯೋ.), ಜಿಲ್ಲಾ ಪಂಚಾಯತ್, ಹಾಸನ. ಮೊಬೈಲ್ ಸಂಖ್ಯೆ: 9482370363

ಸಹಿ/-ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ.

ವಾಸಾಸಂಇ/ಹಿಸನಿ/ಹಾಸನ/548/ಕೆಎಸ್‌ಎಂಸಿಎ/2026-27

# ಬರ: ಶ್ರದ್ಧೆ-ಭಕ್ತಿಯಿಂದ ಹಾಸನಾಂಬ ದರ್ಶನೋತ್ಸವ

## ಅ.29 ರಿಂದ ನ.11ರ ವರೆಗೆ ಜಾತ್ರೆ: ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯ ಏಳು ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿರುವ ಹಿನ್ನಲೆ ಈ ಬಾರಿ ಹಾಸನಾಂಬ ದರ್ಶನೋತ್ಸವವನ್ನು ಅದ್ದೂರಿಯಾಗಿ ಆಚರಿಸುವ ಬದಲು ಭಕ್ತಿ ಹಾಗು ಶ್ರದ್ಧೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ವರ್ಷಕ್ಕೊಮ್ಮೆ ಭಕ್ತರಿಗೆ ದರ್ಶನ ಭಾಗ್ಯ ಕರುಣಿಸುವ ಹಾಸನಾಂಬ ದರ್ಶನೋತ್ಸವಕ್ಕೆ ಜಿಲ್ಲಾಡಳಿತದಿಂದ ಸಕಲ ಸಿದ್ಧತೆ ಭರದಿಂದ ಸಾಗಿದೆ. ಅ.29 ರಿಂದ ನ.11ರ ವರೆಗೆ ಒಟ್ಟು 14 ದಿನಗಳ ಕಾಲ ದೇವಸ್ಥಾನದ ಬಾಗಿಲು ತೆರೆಯಲಿದೆ. 12 ದಿನಗಳ ಕಾಲ ಸಾರ್ವಜನಿಕರಿಗೆ ದೇವಿಯ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುವುದು. ಅ.29ರಂದು ಮಧ್ಯಾಹ್ನ 12 ಗಂಟೆಗೆ ಶಾಸ್ತ್ರೋಕ್ತವಾಗಿ ಹಾಸನಾಂಬ ದೇವಿಯ ಗರ್ಭಗುಡಿಯ ಬಾಗಿಲು ತೆರೆಯಲಾಗುವುದು. ಅ.30ರಿಂದ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಕಲ್ಪಿಸಲಾ ಗುತ್ತದೆ. ನ.11ರಂದು ಮಧ್ಯಾಹ್ನ 12 ಗಂಟೆಗೆ ದೇವಿಯ ದರ್ಶನ ಮುಕ್ತಾಯಗೊಳಿಸಿ ದೇವಸ್ಥಾನದ ಬಾಗಿಲು ಮುಚ್ಚಲಾಗುವುದೆಂದು



ಹೇಳಿದರು.

ದೇವಸ್ಥಾನದ ಬಾಗಿಲು ತೆರೆಯುವ ಮೊದಲ ದಿನ ಹಾಗು ಮುಚ್ಚುವ ಕೊನೆಯ ದಿನ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಉಳಿದ 12 ದಿನಗಳಲ್ಲಿ ಭಕ್ತರು ದೇವಿಯ ದರ್ಶನ ಪಡೆಯಬಹುದಾಗಿದೆ. ಕಳೆದ ಬಾರಿಯಂತೆ ಈ ಬಾರಿಯೂ ವಿವಿಧ ಚಟುವಟಿಕೆಗಳನ್ನು ಆಯೋಜಿಸಲು ನಿರ್ಧರಿಸಲಾಗಿದ್ದು, ಈಗಾಗಲೇ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಸಮಿತಿಗಳು ತಮ್ಮ ಜವಾಬ್ದಾರಿಗಳನ್ನು ನಿರ್ವಹಿಸುತ್ತಿವೆಂದು ತಿಳಿಸಿದರು.

### ನಾಳೆ ಪೋಸ್ಟರ್ ಬಿಡುಗಡೆ

ಹಾಸನಾಂಬ ಹಾಗು ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವದ ಸಿದ್ಧತೆ ಆರಂಭಗೊಂಡಿವೆ. ಸೆ.26ರಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಲಿದೆ. ಈ ಸಂದರ್ಭದಲ್ಲಿ ಜಾತ್ರಾ ಮಹೋತ್ಸವದ ಪೋಸ್ಟರ್ ಬಿಡುಗಡೆ ಮಾಡಲಾಗು ವುದು. ಜೊತೆಗೆ ಜಾತ್ರಾ ಮಹೋತ್ಸವಕ್ಕೆ ಸಂಬಂಧಿಸಿದ ಅಂತರ್ಜಾಲ ತಾಣಕ್ಕೂ ಚಾಲನೆ ನೀಡಲಾಗುವುದೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರು ತಿಳಿಸಿದರು.

ಜಾತ್ರಾ ಮಹೋತ್ಸವದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಕ್ರೀಡಾಕೂಟ ಸೇರಿ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲು ನಿರ್ಧರಿಸಲಾಗಿದೆ. ಭಕ್ತರ ಭಾವನೆಗಳಿಗೆ ಧಕ್ಕೆಯಾಗದಂತೆ ಸರಳ ಹಾಗು ವ್ಯವಸ್ಥಿತವಾಗಿ ಜಾತ್ರೆ ನಡೆಸಲು ಜಿಲ್ಲಾಡಳಿತ ಕ್ರಮ ಕೈಗೊಂಡಿದೆ ಎಂದರು.

**ಪ್ರತಿದಿನ ಒಂದು ಲಕ್ಷಕ್ಕೂ ಅಧಿಕ ಭಕ್ತರ ನಿರೀಕ್ಷೆ**

ಕಳೆದ ಬಾರಿಗಿಂತ ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆಯಿದೆ. ಪ್ರತಿದಿನ ಒಂದು ಲಕ್ಷಕ್ಕೂ ಅಧಿಕ ಭಕ್ತರು ಹಾಸನಾಂಬ ದೇವಿ ದರ್ಶನ ಪಡೆಯುವ ಸಾಧ್ಯತೆ ಇರುವುದರಿಂದ ಯಾವುದೇ ರೀತಿಯ ಲೋಪವಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಜಿಲ್ಲೆ ಮಾತ್ರವಲ್ಲದೆ ರಾಜ್ಯದ ವಿವಿಧ ಜಿಲ್ಲೆಗಳು ಹಾಗು ಹೊರರಾಜ್ಯಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸುವ ನಿರೀಕ್ಷೆಯಿದೆ ಎಂದು ಹೇಳಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರ ಅಧ್ಯಕ್ಷತೆಯಲ್ಲಿ ಈಗಾಗಲೇ ಸಭೆ ನಡೆಸಿ ಜಾತ್ರಾ ಮಹೋತ್ಸವದ ಸಿದ್ಧತೆಗಳ ಕುರಿತು ಚರ್ಚಿಸಲಾಗಿದೆ. ಸಚಿವರ ಮಾರ್ಗದರ್ಶನದಲ್ಲಿ ವಿವಿಧ ಇಲಾಖೆಗಳು ತಮ್ಮ ಕಾರ್ಯಗಳನ್ನು ಕೈಗೊಂಡಿವೆ. ಹಾಸನಾಂಬ ದೇವಿ ಸುಗಮ ದರ್ಶನಕ್ಕೆ ಅಗತ್ಯ ವ್ಯವಸ್ಥೆಗಳನ್ನು ಮಾಡಲಾಗುತ್ತಿದೆ. ಭಕ್ತರಿಗೆ ಕುಡಿಯುವ ನೀರು, ಸ್ವಚ್ಛತೆ, ಬ್ಯಾರಿಕೇಡ್ ವ್ಯವಸ್ಥೆ ಹಾಗು ಜರ್ಮನ್ ಟೆಂಟ್‌ಗಳ ಅಳವಡಿಕೆ ಸೇರಿಅಗತ್ಯ ಮೂಲ ಸೌಕರ್ಯಗಳನ್ನು ಕಲ್ಪಿಸಲಾಗುವುದೆಂದು ತಿಳಿಸಿದರು.

## ಸರ್ವೆ ಅಧಿಕಾರಿಗಳ ಬೆವರಿಳಿಸಿದ ಜಿಲ್ಲಾಧಿಕಾರಿ ಲತಾಕುಮಾರಿ

» ಮೊದಲನೇ ಪುಟದಿಂದ

**ಜನಸಂಪರ್ಕ ಸಭೆಯಂತಲ್ಲ ಪ್ರಜಾಸೇವೆ**

ಪ್ರತಿ ತಾಲ್ಲೂಕು, ಹೋಬಳಿ ಮಟ್ಟ ದಲ್ಲಿ ನಡೆಯುತ್ತಿರುವ ಪ್ರಜಾ ಸೇವಾ ಆಂದೋಲನವನ್ನು ಈ ಹಿಂದೆ ನಡೆ ಯುತ್ತಿದ್ದ ಜನಸಂಪರ್ಕ ಸಭೆಯಂತೆ ಪರಿಗಣಿಸಬಾರದು. ಅದನ್ನು ಎಲ್ಲಾ ಅಧಿಕಾರಿಗಳು ಮನದಟ್ಟು ಮಾಡಿ ಕೊಳ್ಳಬೇಕು. ಸಲ್ಲಿಕೆಯಾದ ಅರ್ಜಿಗಳ ವಿಲೇವಾರಿ ಎರಡು ತಿಂಗಳೊಳಗಾಗಿ ಆಗಲೇಬೇಕು. ಎಲ್ಲಾ ಅರ್ಜಿಗಳನ್ನು ಒಂದೇ ಎಂದು ಭಾವಿಸ ಬಾರದು. ಕಂದಾಯ, ಪಂಚಾಯತ್ ರಾಜ್ ಇಲಾಖೆ ಸಮ ಸ್ಯೆಗಳನ್ನು ಗಂಭೀರ ವಾಗಿ ಪರಿಗಣಿಸಬೇಕು. ಅರ್ಜಿಗಳ ವಿಲೇವಾರಿ ಕುರಿತು ನಿಗಾ ವಹಿಸಬೇಕೆಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿ 916 ಕಂದಾಯ ಗ್ರಾಮಗಳಿವೆ. 58 ಗ್ರಾಮಗಳಿಗೆ ಅಂತಿಮ ಅಧಿಸೂಚನೆ ಹೊರಡಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಈ ಗ್ರಾಮಗಳಲ್ಲಿ ಅಂದಾಜು 32 ಸಾವಿರ ನಿವೇಶನ ಹಕ್ಕುಪತ್ರ ವಿತರಿಸಬಹುದು. ಕಳೆದ ವರ್ಷ ಕೇವಲ 42 ಗ್ರಾಮಗಳನ್ನು ಗುರುತಿಸಲಾಗಿತ್ತು. ನನ್ನ ಬಳಿ ಇರುವಷ್ಟು ಮಾಹಿತಿ ನೀವು ಹೊಂದಿಲ್ಲವೆಂದರೆ ಏನರ್ಥ ಎಂದು ತರಾಟೆಗೆ ತೆಗೆದುಕೊಂಡರು.

ಸಕಲೇಶಪುರ ಸಭೆಯಲ್ಲಿ ನಡೆದ ಪ್ರಮಾದ ಬೇರೆ ಎಲ್ಲಿಯೂ ಕಾಣಿಸಿಕೊಳ್ಳಬಾರದು. ಕರ್ತವ್ಯ ಲೋಪದಡಿ ಅಮಾನತು ಗೊಂಡಿರುವ ಎಸ್.ಆರ್.ಮನು ಹಾಗು ಗಿರೀಶ್ ಅವರ ಜಾಗಕ್ಕೆ ಬೇರೆಯವರನ್ನು ನಿಯೋಜಿಸಬೇಕು. ಸರ್ಕಾರಿ ನೌಕರರಿಗೆ ಪ್ರತಿದಿನ ಸವಾಲುಗಳಿರುತ್ತವೆ. ಸರ್ವೆ ಇಲಾಖೆಯಲ್ಲಿ ಕೆಲಸ ಮಾಡುವುದು ಸುಲಭವಲ್ಲ. ಇಷ್ಟೆಲ್ಲಾ ತಿಳಿಹೇಳಿದರೂ ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಅಪರ ಜಿಲ್ಲಾಧಿಕಾರಿ ಕೃಷ್ಣಮೂರ್ತಿ ಇತರರಿದ್ದರು.

## ಸಚಿವ ಶಿವಲಿಂಗೇಗೌಡರ ವಿರುದ್ಧ ಅಪಪ್ರಚಾರ

» ಮೊದಲನೇ ಪುಟದಿಂದ

ಗಳಲ್ಲಿ ಅಪಪ್ರಚಾರ ನಡೆಸಲಾಗುತ್ತಿದೆ. ಸರ್ಕಾರದ ಸೇವೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಿ ಜನರ ಕುಂದು-ಕೊರತೆಗೆ ಪರಿಹಾರ ಕಲ್ಪಿಸುವುದಾಗಿದೆ. ಅರಸೀಕೆರೆ ಹಾಗು ಸಕಲೇಶಪುರದಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ಪಹಣಿ, ಸರ್ವೆ, ಪೋಡಿ ಸೇರಿ ವಿವಿಧ ಸಮಸ್ಯೆಗಳ ಕುರಿತು ಸಾರ್ವಜನಿಕರಿಂದ ಅರ್ಜಿಗಳನ್ನು ಸ್ವೀಕರಿಸಿ, ಅಧಿಕಾರಿಗಳ ಸಮ್ಮುಖದಲ್ಲಿ ಪರಿಹಾರ ಕಂಡುಕೊಳ್ಳುವ ಪ್ರಯತ್ನ ನಡೆದಿದೆ ಎಂದರು.

ಸರ್ಕಾರದ ಜನಪರ ಕಾರ್ಯಕ್ರಮಗಳನ್ನು ಜನರ ಮನೆ ಬಾಗಿಲಿಗೆ ಕೊಂಡೊಯ್ಯುತ್ತಿರುವ ಸಂದರ್ಭದಲ್ಲಿ ಕೆಲವರು ರಾಜಕೀಯ ಕಾರಣಕ್ಕಾಗಿ ವಿಚಾರವನ್ನು ಬೇರೆ ರೀತಿಯಲ್ಲಿ ಬಿಂಬಿಸುತ್ತಿದ್ದಾರೆ. ಜನರು ಸಂಪೂರ್ಣ ವಿಚಾರವನ್ನು ಗಮನಿಸಿ ವಾಸ್ತವಾಂಶ ಅರಿತುಕೊಳ್ಳಬೇಕು ಎಂದರು.

ಕಾಂಗ್ರೆಸ್ ಮುಖಂಡ ಬನವಾಸೆ ರಂಗಸ್ವಾಮಿ ಅವರು ಮಾತನಾಡಿ, ಸಚಿವ ಶಿವಲಿಂಗೇಗೌಡ ಅವರ ಬೆಂಬಲಕ್ಕೆ ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗು ಕಾರ್ಯಕರ್ತರು ಇದ್ದಾರೆ. ಸಚಿವರ ವಿರುದ್ಧ ಪ್ರತಿಭಟನೆ ಅಥವಾ ಹೋರಾಟ ನಡೆದರೆ ಪಕ್ಷದ ವತಿಯಿಂದಲೂ ಪ್ರತಿಕ್ರಿಯೆ ನೀಡಲಾಗುವುದು. ನೂತನ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರೊಂದಿಗೆ ಸಚಿವ ಶಿವಲಿಂಗೇಗೌಡ ಅವರ ನೇತೃತ್ವದಲ್ಲಿ ಜಿಲ್ಲೆಯಾದ್ಯಂತ ಜನಪರ ಕಾರ್ಯಕ್ರಮಗಳನ್ನು ನಡೆಸಲು ರೂಪುರೇಷೆ ಸಿದ್ಧಪಡಿಸಲಾಗುತ್ತಿದೆ. ಎಲ್ಲಾ ತಾಲ್ಲೂಕುಗಳಲ್ಲೂ ಕಾರ್ಯಕರ್ತರ ಸಭೆ ನಡೆಸಿ ಪಕ್ಷ ಸಂಘಟನೆಯನ್ನು ಬಲಪಡಿಸಲಾಗುವುದೆಂದರು.

ಜಿಲ್ಲೆಯಲ್ಲಿ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸುತ್ತಿದ್ದು, ಆಡಳಿತ ವ್ಯವಸ್ಥೆ ಸುಗಮವಾಗಿ ನಡೆಯುತ್ತಿದೆ. ಸಚಿವರ ವಿರುದ್ಧದ ವಿಚಾರ ಮುಂದಿಟ್ಟುಕೊಂಡು ಅನಗತ್ಯ ರಾಜಕೀಯ ಮಾಡುವುದನ್ನು ಕಾಂಗ್ರೆಸ್ ಖಂಡಿಸುತ್ತದೆಂದು ತಿಳಿಸಿದರು. ಪಕ್ಷದ ಮುಖಂಡರಾದ ದಾಸರಕೊಪ್ಪಲು ರಘು, ಲವ, ಪ್ರಕಾಶ್, ಅನು, ಕುಮಾರಸ್ವಾಮಿ, ಇರ್ಫಾನ್ ಇದ್ದರು.

## ವಿಟಿಯು ಅಂತರ ಕಾಲೇಜು ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಎಂಸಿಇ ಸಾಧನೆ




• ಪ್ರಜೋದಯ ವರದಿ

**ಹಾಸನ:** ನಗರದ ಮಲೆನಾಡು ಇಂಜಿನೀಯರಿಂಗ್ ಕಾಲೇಜಿನ ಪುರುಷರ ಮತ್ತು ಮಹಿಳೆಯರ ಬ್ಯಾಡ್ಮಿಂಟನ್ ತಂಡಗಳು ತಿಪಟೂರಿನ ಕಲ್ಪತರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನಲ್ಲಿ ನಡೆದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಅಂತರ ಕಾಲೇಜು ವಿಭಾಗ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಗಮನಾರ್ಹ ಸಾಧನೆ ಮಾಡಿವೆ.

ಪಂದ್ಯಾವಳಿಯಲ್ಲಿ ಕಾಲೇಜಿನ ಪುರುಷರ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದ್ದು, ಮಹಿಳೆಯರ ತಂಡ ರನ್ನರ್-ಅಪ್ ಸ್ಥಾನ ಪಡೆದುಕೊಂಡಿದೆ.

ರಾಹುಲ್ ರಾಘವೇಂದ್ರ ಆರ್, ವಿನಯ್ ಆರ್, ಧ್ಯಾನ್ ನಾಯಕ ಬಿ.ಕೆ., ಆರ್ಯ ಎಚ್.ಆರ್. ಹಾಗೂ ಯದುನಂದನ್ ಎಂ. ಅವರು ಪುರುಷರ ತಂಡದ ಭಾಗವಾಗಿದ್ದರು. ಸಹನಾ ಸಿ.ಕೆ., ಅಹನಾ ಎಚ್. ಹಾಗೂ ಸನಿಹಾ ಎಸ್.ಗೌಡ ಅವರು ಕಾಲೇಜಿನ ಮಹಿಳಾ ತಂಡವನ್ನು ಪ್ರತಿನಿಧಿಸಿದ್ದರು.

ವಿದ್ಯಾರ್ಥಿಗಳ ಈ ಸಾಧನೆಗೆ ಕಾಲೇಜಿನ ಪ್ರಾಂಶುಪಾಲರು, ಆಡಳಿತ ಮಂಡಳಿ, ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದು, ವಿದ್ಯಾರ್ಥಿಗಳ ಪರಿಶ್ರಮ, ತಂಡದ ಒಗ್ಗಟ್ಟು ಹಾಗೂ ಕ್ರೀಡಾ ಸ್ಫೂರ್ತಿ ಕಾಲೇಜಿಗೆ ಹೆಮ್ಮೆ ತಂದಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

## ಆಲೂಗೆಡ್ಡೆ ಕುಫ್ರಿ ಕರಣ್ ಹೊಸ ತಳಿ ಕ್ಷೇತ್ರೋತ್ಸವ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆಯಲ್ಲಿ ಆಲೂಗೆಡ್ಡೆ ಬೆಳೆಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ತೋಟಗಾರಿಕೆ ಇಲಾಖೆಯಿಂದ ಕುಫ್ರಿ ಕರಣ್ ಹೊಸ ತಳಿಯನ್ನು ಪರಿಚಯಿಸಿದ್ದು, ರೈತರಿಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ವಿವಿಧ ಭಾಗದಲ್ಲಿ ಕ್ಷೇತ್ರೋತ್ಸವ ಹಮ್ಮಿಕೊಂಡಿದೆ.

ಬೈರಾಪುರ, ಗೌರಿಪುರ, ಸೋಮನಹಳ್ಳಿ ಕಾವಲು ವಿವಿಧಡೆ ರೈತರನ್ನು ಒಗ್ಗೂಡಿಸಿ ಕ್ಷೇತ್ರೋತ್ಸವ ಏರ್ಪಡಿಸಲಾಗಿದೆ. ಗುರುವಾರ ತಾಲ್ಲೂಕಿನ ಸೋಮನಹಳ್ಳಿ ಕಾವಲು ಗ್ರಾಮದಲ್ಲಿ ದೀಪಕ್ ಎಂಬುವವರ ಜಮೀನಿನಲ್ಲಿ ಆಲೂಗೆಡ್ಡೆ-ಕುಫ್ರಿ ಕರಣ್ ತಳಿಯ ಕ್ಷೇತ್ರೋತ್ಸವ ಉದ್ಘಾಟಿಸಿ ಮಾತನಾಡಿದ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಯೋಗೇಶ್ ಅವರು, ಜಿಲ್ಲೆಯಲ್ಲಿ ಹಲವು ವರ್ಷಗಳಿಂದ ಆಲೂಗೆಡ್ಡೆ ಬೆಳೆಯುತ್ತಿದ್ದಿರಿ. ಇತ್ತೀಚೆಗೆ ಕೆಲವು ಕಾರಣಗಳಿಂದ ಆಲೂಗೆಡ್ಡೆ ಬೆಳೆಯುವ ಪ್ರದೇಶ ಕಡಿಮೆಯಾ ಗಿದೆ. ತೋಟಗಾರಿಕೆ ಇಲಾಖೆ ಈ ವಿಚಾರವನ್ನು ಸರ್ಕಾರಕ್ಕೆ ಮನವರಿಕೆ ಮಾಡುವ ಕೆಲಸ ಮಾಡುತ್ತಿದೆ ಎಂದರು.

20 ವರ್ಷದ ಹಿಂದೆ ಜಿಲ್ಲೆಯಲ್ಲಿ 1.25 ಲಕ್ಷ ಎಕರೆ ಪ್ರದೇಶದಲ್ಲಿ ಆಲೂಗೆಡ್ಡೆ ಬೆಳೆಯಲಾ ಗುತ್ತಿತ್ತು. 2005ರಲ್ಲಿ



ಅಂಗಮಾರಿ ರೋಗ ವ್ಯಾಪಿಸಿದ ಪರಿಣಾಮ ಶೇ.70ರಷ್ಟು ಕುಸಿತ ಕಂಡಿದೆ ಎಂದು ವಿವರಿಸಿದರು.

ಒಂದು ಸಮಯದಲ್ಲಿ ಸೋಮನಹಳ್ಳಿ ಕಾವಲು ಆಲೂಗೆಡ್ಡೆ ಬೆಳೆಗೆ ಹೆಸರುವಾಸಿಯಾಗಿತ್ತು.1968ರ ಕಾಲಘಟ್ಟದಲ್ಲಿ ಡಾ.ಎಂ.ಹೆಚ್. ಮರಿಗೌಡ ಅವರ ಕಾಲದಲ್ಲಿ ರಾಜ್ಯದಲ್ಲೇ ಮೊದಲ ಬಾರಿಗೆ ಹಾಸನ ಜಿಲ್ಲೆಗೆ ಆಲೂ ಸಂರಕ್ಷಣೆಗೆ ಕೋಲ್ಡ್ ಸ್ಟೋರೇಜ್ ತರಲಾಯಿತು. ಪ್ರಸ್ತುತ ಅದು ಶಿಥಿಲಗೊಂಡಿದ್ದು, ಈಗ ಹೊಸ ದಾಗಿ ಸುಸಜ್ಜಿತ ಕೋಲ್ಡ್ ಸ್ಟೋರೇಜ್ ನಿರ್ಮಾಣ ಮಾಡಲಾಗುತ್ತಿದೆ ಎಂದರು.

ಆಲೂ ವಿಶಿಷ್ಟ ಬೆಳೆಯಾಗಿದ್ದು, ತರಕಾರಿ, ಆಹಾರ ಬೆಳೆಯೂ ಹೌದು. ದೇಶದ ಉತ್ತರ ಭಾಗದಲ್ಲಿ ಆಲೂ ನಿತ್ಯದ ಆಹಾರವಾಗಿದೆ. ಪ್ರಪಂಚದ ಇತರೆ ದೇಶಗಳಲ್ಲಿ ಆಲೂ ಅವಲಂಬಿಸಿದ್ದಾರೆ. ಆಲೂಗೆಡ್ಡೆಯ ಮಹತ್ವ ಅರಿತು ರೈತರು ಹೆಚ್ಚು-ಹೆಚ್ಚು ಬೆಳೆಯುವಂತಾಗಬೇಕು ಎಂದರು.

ಮುಂಗಾರು ಹಂಗಾಮಿನಲ್ಲಿ ಆಲೂಗೆಡ್ಡೆ ಬೆಳೆಯುವಲ್ಲಿ ಜಿಲ್ಲೆ ಅಗ್ರ ಸ್ಥಾನದಲ್ಲಿತ್ತು. ಜಿಲ್ಲೆಯಲ್ಲಿ ಮುಂಗಾರು, ಹಿಂಗಾರು ಎರಡು ಅವಧಿಯಲ್ಲೂ ಬೆಳೆಯಬಹುದಾಗಿದೆ. ರೋಗ ನಿಯಂತ್ರಣಕ್ಕೆ ಸಂಶೋಧನೆ ನಡೆಯುತ್ತಿದೆ. ಈಗ ಅಂಗಮಾರಿ ರೋಗಕ್ಕೆ ಔಷಧಿಗಳ ಕಂಡು ಹಿಡಿಯಲಾಗಿದೆ ಎಂದರು.

ಜ್ಯೋತಿ, ಹಿಮಾಲಿನಿ ತಳಿಯ ಆಲೂಗೆಡ್ಡೆಗೆ 3 ರಿಂದ 5 ಬಾರಿ ಔಷಧಿ ಸಿಂಪಡಿಸಬೇಕು. ಕುಫ್ರಿ ಕರಣ್ ತಳಿ ಅಂಗಮಾರಿ ರೋಗ ತಡೆಯುವ ಶಕ್ತಿ ಹೊಂದಿದ್ದು, ಔಷಧಿ ಸಿಂಪಡಿಸದೆ ಕಡಿಮೆ ಖರ್ಚಿನಲ್ಲಿ ಉತ್ತಮ ಇಳುವರಿ ನೀಡುತ್ತಿದೆ. ಈ ತಳಿಯ ಬಗ್ಗೆ ರೈತರು ತಿಳಿದು ಎಲ್ಲರೂ ಬೆಳೆ ಯುವಂತಾಗಬೇಕು. ಈ ಬಗ್ಗೆ ಹೆಚ್ಚು-ಹೆಚ್ಚು ಜಾಗೃತಿ ಮೂಡಿಸುವ ಕೆಲಸವಾಗಬೇಕು. ರೈತರು ಸಸಿ ತಂದು ಬೆಳೆಸಿ, ಬೀಜವನ್ನು ಗ್ರಾಮಗಳಲ್ಲೇ ಉತ್ಪಾದಿಸುವಂತಾಗಲಿ ಎಂದು ಹೇಳಿದರು.

ಕಂದಲಿ ಕೆವಿಕೆ ಕೇಂದ್ರದ ಡಾ.ಭರತ್, ಮಂಜುನಾಥ್ ಶೆಟ್ಟಿ, ಐಟಿಸಿ ಕಂಪನಿಯ ಅಸ್ಲಾಮ್, ಗ್ರಾಮದ ಶಿವಲಿಂಗ, ಸೋಮೇಶ್ ಮತ್ತಿತರರಿದ್ದರು.

## ಮಳೆಗಾಗಿ ಪ್ರಾರ್ಥಿಸಿ ಗಣಪತಿಗೆ ವಿಶೇಷ ಪೂಜೆ

• ಪ್ರಜೋದಯ ವರದಿ

**ಹಾಸನ:** ಜಿಲ್ಲೆ ಸೇರಿ ರಾಜ್ಯಾದ್ಯಂತ ಉತ್ತಮ ಮಳೆಯಾಗಿ ನೆಮ್ಮದಿಯ ಬದುಕು ಪ್ರಾಪ್ತವಾಗಲಿ ಎಂದು ಪ್ರಾರ್ಥಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಗುರುವಾರ ಪೆಂಡಾಲ್ ಗಣಪತಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಜಿ.ಬಿ. ಶಶಿಧರ್ ಅವರು ಮಾತನಾಡಿ, ಜನರು ಪ್ರಸ್ತುತ ಬರ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ವಿಘ್ನೇಶ್ವರನಲ್ಲಿ ಉತ್ತಮ ಮಳೆ ಹಾಗು ಸಮೃದ್ಧ ಬೆಳೆಗಾಗಿ ಪ್ರಾರ್ಥಿಸಲಾಗಿದೆ. ಮಳೆ-ಬೆಳೆ ಉತ್ತಮವಾದರೆ ರೈತರು ಸೇರಿ ಎಲ್ಲರ ಬದುಕು ಸುಧಾರಿಸಲಿದೆ ಎಂದರು.

ಗಣಪತಿ ಪೆಂಡಾಲ್‌ನಲ್ಲಿ ಕಳೆದ 72 ವರ್ಷಗಳಿಂದ ಗಣೇಶ ಮೂರ್ತಿ ಪ್ರತಿಷ್ಠಾಪಿಸಲಾಗುತ್ತಿದೆ. ಯಾವ ಪಕ್ಷ ಭೇದವಿಲ್ಲದೆ ಹಾಸನದ ಸರ್ವ ಜನರಿಗೂ ಒಳಿತಾಗಲಿ, ಎಲ್ಲರ ಜೀವನದಲ್ಲಿ ಸುಖ, ಶಾಂತಿ ಮತ್ತು ಸಮೃದ್ಧಿ ನೆಲೆಸಲಿ ಎಂಬ ಆಶಯ ದಿಂದ ಪೂಜೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡರಾದ ಬನವಾಸೆ ರಂಗಸ್ವಾಮಿ, ದಾಸರ ಕೊಪ್ಪಲು ರಘು, ಪ್ರಕಾಶ್, ಇರ್ಫಾನ್, ಗಣಪತಿ ಸೇವಾ ಸಮಿತಿ ಅಧ್ಯಕ್ಷ ಡಾ||ಹೆಚ್.ನಾಗರಾಜು, ಕಾರ್ಯದರ್ಶಿ ಚನ್ನವೀರಪ್ಪ, ಕಮಲ್ ಕುಮಾರ್, ಬೂದೇಶ್, ಅನಂತ ನಾರಾಯಣ್ ಇತರರಿದ್ದರು.



## ಕಲ್ಲು ಕ್ವಾರಿ ವಾಹನಗಳಿಂದ ತೊಂದರೆ: ಕರವೇ ಮನವಿ



• ಪ್ರಜೋದಯ ವರದಿ

**ಸಕಲೇಶಪುರ:** ಕಟ್ಟಡ ನಿರ್ಮಾಣ ಮತ್ತಿತರ ಕಾಮಗಾರಿಗೆ ಕ್ವಾರಿ ಮತ್ತು ಕ್ರಷರ್‌ಗಳಿಂದ ಜಲ್ಲಿ ಕಲ್ಲು ಮತ್ತಿತರ ಸಾಮಾಗ್ರಿ ತುಂಬಿಕೊಂಡು ಬರುವ ಟಿಪ್ಪರ್‌ಗಳಿಂದ ಭಾರೀ ತೊಂದರೆಯಾಗು ತ್ತಿದ್ದು, ಅದಕ್ಕೆ ಕಡಿವಾಣ ಹಾಕಬೇಕೆಂದು ಆಗ್ರಹಿಸಿ ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಘಟಕದಿಂದ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗೆ ಗುರುವಾರ ಮನವಿ ಸಲ್ಲಿಸಲಾಯಿತು.

ಲಾರಿ, ಟಿಪ್ಪರ್, ಟ್ರ್ಯಾಕ್ಟರ್ ವಾಹನಗಳು ಕ್ರಷರ್ ಪುಡಿ, ಎಂ.ಸ್ಯಾಂಡ್, ಜಲ್ಲಿಕಲ್ಲು, ಬೋಲ್ಡರ್ಸ್‌ಗಳನ್ನು ಸೂಕ್ತ ಮುಂಜಾಗ್ರತೆ ವಹಿಸದೆ ಸಾಗಿಸುತ್ತಿವೆ. ಅದರಿಂದ ಪಾದಚಾರಿಗಳು, ದ್ವಿಚಕ್ರ ಹಾಗು ಕಾರು ಚಾಲಕರು ರಸ್ತೆಯಲ್ಲಿ ಓಡಾಡಲು ತೊಂದರೆ ಅನುಭವಿಸುವಂತಾಗಿದೆ. ತಾಲ್ಲೂಕಿನ ಅನೇಕ ಕಡೆ ಈ ಕಾರಣಕ್ಕಾಗಿಯೇ ಅಪಘಾತಗಳು ಸಂಭವಿಸುತ್ತಿವೆ. ಕಲ್ಲು ಪುಡಿಗಳು ಕಾರಿನ ಗಾಜಿಗೆ ಬಿದ್ದು ಹಾನಿ ಸಂಭವಿಸುತ್ತಿದೆ ಎಂದರು.

ಒಂದು ವಾಹನಕ್ಕೆ ಇಷ್ಟೇ ಲೋಡ್ ತುಂಬಬೇಕೆಂಬ ನಿಯಮವಿದೆ. ತಾಲ್ಲೂಕಿನಲ್ಲಿ ಕಾನೂನು ಪಾಲನೆಯಾಗುತ್ತಿಲ್ಲ. ಅಧಿಕಾರಿಗಳು ಈ ನಿಟ್ಟಿನಲ್ಲಿ ಜಾಣ ಮೌನ ವಹಿಸಿದ್ದಾರೆ. ಇನ್ನಾದರೂ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಪರಿಹಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ವೇದಿಕೆ ತಾಲ್ಲೂಕು ಅಧ್ಯಕ್ಷ ರಮೇಶ್, ಆರ್.ಎಸ್.ಭಾಸ್ಕರ್, ಧರಣಿ, ಎ.ಎಸ್.ಶರತ್, ಎಸ್.ಕೆ.ಪರಮೇಶ್, ಗಗನ್ ಇದ್ದರು.

## ಭಕ್ತಿ-ಶಕ್ತಿಯ ಮಹಾಸಂಗಮವೇ ಮಾಡಾಳು

• ಪ್ರಜೋದಯ ವರದಿ

**ಮಾಡಾಳು:** ಭಕ್ತಿ ಮತ್ತು ಶಕ್ತಿಯ ಮಹಾ ಸಂಗಮವೇ ಮಾಡಾಳು ಮೂಲಸ್ಥಾನ ಶ್ರೀ ಸ್ವರ್ಣ ಗೌರಮ್ಮ ದೇವಿ ನೆಲೆಸಿರುವ ಸನ್ನಿಧಿ ಎಂದು ಹಾರನಹಳ್ಳಿ ಸುಕ್ಷೇತ್ರ ಕೋಡಿಮಠದ ಜಗದ್ಗುರು ಡಾ.ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ತಿಳಿಸಿದರು.

ದೇವಾಲಯದ ಗರ್ಭಗುಡಿಯಲ್ಲಿ ಪ್ರತಿಷ್ಠಾಪಿಸಿರುವ ಅಮ್ಮನವರಿಗೆ ಸಂಪ್ರದಾಯದಂತೆ 10ನೇ ದಿನ ದೊಡ್ಡಮಂಗಳಾರತಿ (ಮಹಾ ಮಂಗಳಾರತಿ) ಸೇವೆಯಲ್ಲಿ ಆಶೀರ್ವಚನ ನೀಡಿದ ಅವರು, ಮಾಡಾಳು-ಕೋಡಿಮಠಕ್ಕೆ ಅವಿನಾಭಾವ ಸಂಬಂಧವಿದೆ. ಕೋಡಿಮಠದಲ್ಲಿ ಯೋಗ ಸಮಾಧಿಯಲ್ಲಿರುವ ಮಹಾ ತಪಸ್ವಿ ಶಿವಲಿಂಗಸ್ವಾಮಿ ಒಂದು ಕೋಟಿ ಜಪ ಮಾಡಿ ಸಿದ್ಧಿಸಿದ ಬಂಗಾರದ ಮೂಗುತಿಯನ್ನು ಗೌರಿ ಹಬ್ಬದಂದು ಗೌರಮ್ಮ ದೇವಿಗೆ ಧಾರಣೆ ಮಾಡಿದ ನಂತರ ದೇವಿ ಸಾಕ್ಷಾತ್ ಪಾರ್ವತಿ ದೇವಿಯಾಗಿ ಕಂಗೊಳಿಸುತ್ತಾಳೆಂದರು.

ಅಮ್ಮನವರು ತನ್ನ ನಂಬಿ ಬರುವ ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುತ್ತ ಸಂಕಷ್ಟಗಳನ್ನು ಪರಿಹರಿಸುತ್ತಾ ಬಂದಿರುವುದರಿಂದ ಭಕ್ತರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. ಅಲ್ಲದೆ ರಾಜ್ಯದಲ್ಲಿರುವ ಶಕ್ತಿಪೀಠಗಳಂತೆ ಇದು ಮತ್ತೊಂದು ಶಕ್ತಿ ಪೀಠವಾಗಿ ಬೆಳೆಯಲಿದೆ ಎಂದು ಸ್ವಾಮೀಜಿ ಹೇಳಿದರು.

ಕೋಡಿಮಠದ ಉತ್ತರಾಧಿಕಾರಿ ಚೇತನ್ ಮರಿದೇವರು ಮೂಲ ಸನ್ನಿಧಿಯಲ್ಲಿ ಪೂಜೆ



ಸಲ್ಲಿಸಿ ಭಕ್ತರು ಫಲಾಹಾರದ ಕುಕ್ಕೆಗಳನ್ನು ಹೊತ್ತು ಮಂಗಲ ಕರಡೇ ವಾದ್ಯದೊಂದಿಗೆ ನೂರಾರು ಭಕ್ತರ ಒಡಗೂಡಿ ಉತ್ಸವದಲ್ಲಿ ಗೌರಮ್ಮ ದೇವಾಲಯಕ್ಕೆ ತೆರಳಿದರು. 9 ಗಂಟೆಗೆ ಸರಿಯಾಗಿ ಶ್ರೀಗಳ ಸಾನಿಧ್ಯದಲ್ಲಿ ದೇವಾಲಯದ ಪದ್ಧತಿಯಂತೆ ಧಾರ್ಮಿಕ ವಿಧಿ ವಿಧಾನದೊಂದಿಗೆ ಕರ್ಪೂರದಾರತಿ ಬೆಳಗಲಾಯಿತು. ಗೊಲ್ಲಳ್ಳಿ ವಿದ್ಯಾಶಂಕರ ದೇಸಿ ಕೇಂದ್ರ ಸ್ವಾಮೀಜಿ, ಐನಳ್ಳಿ ಪ್ರಶಾಂತ್ ದೇವರು, ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ನಿವೃತ್ತ ಡಿಐಜಿ ಜ್ಯೋತಿ ಪ್ರಕಾಶ್ ಮಿರ್ಜಿ, ಉದ್ಯಮಿ ಗಣೇಶ್ ಮತ್ತಿತರರಿದ್ದರು.

## ಸರ್ವೆ ಅಧಿಕಾರಿಗಳ ವಾಪಾಸ್ ಕಳಿಸಿದ ಗ್ರಾಮಸ್ಥರು

• ಪ್ರಜೋದಯ ವರದಿ

**ಸಕಲೇಶಪುರ:** ದಶಕಗಳಿಂದ ಸ್ವಾಧೀನದಲ್ಲಿದ್ದ ಕಾಫಿ ತೋಟ ಹಾಗು ಗ್ರಾಮ ಠಾಣಾ ಜಾಗ ಸರ್ವೆಗೆ ಬಂದಿದ್ದ ಅಧಿಕಾರಿಗಳನ್ನು ಗ್ರಾಮಸ್ಥರು ವಾಪಾಸ್ ಕಳುಹಿಸಿರುವ ಘಟನೆ ತಾಲ್ಲೂಕಿನ ಬೆಳಗೋಡು ಗ್ರಾಮದಲ್ಲಿ ನಡೆದಿದೆ.

ಸರ್ವೆಗೆ ಮುಂದಾದ ಕಂದಾಯ ಇಲಾಖೆ ಅಧಿಕಾರಿಗಳನ್ನು ಸ್ಥಳೀಯರು ತಡೆದ ಹಿನ್ನಲೆಯಲ್ಲಿ ಸರ್ವೆ ಕಾರ್ಯ ಅರ್ಧಕ್ಕೆ ಮೊಟಕುಗೊಂಡಿದ್ದು, ಸ್ಥಳದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿತ್ತು.

ಬೆಳಗೋಡು ಸರ್ವೆ ನಂ.238 ರಲ್ಲಿ 3 ಗುಂಟೆ, ಸರ್ವೆ ನಂ.239 ರಲ್ಲಿ 1 ಎಕರೆ 1 ಗುಂಟೆ ಹಾಗು ಸರ್ವೆ ನಂ.224 ರಲ್ಲಿ 6 ಗುಂಟೆ ಕಾಫಿ ತೋಟದ ಜಮೀನು ನಮ್ಮ ಹೆಸರಿನಲ್ಲಿದ್ದು, ಕಳೆದ 70 ವರ್ಷಗಳಿಂದ ಸ್ವಾಧೀನದಲ್ಲಿದೆ. ನಾವು ಸ್ಥಳದಲ್ಲಿ ಇಲ್ಲದ ಸಮಯ ನೋಡಿ ಗ್ರಾಮ ಪಂಚಾಯಿತಿಯವರು ಕಾಫಿ, ಸಿಲ್ವರ್, ಅಡಿಕೆ ಹಾಗು ತೆಂಗಿನ ಮರಗಳನ್ನು ಏಕಾಏಕಿ ಕಡಿದು ಹಾಕಿದ್ದಾರೆಂದು ಆರೋಪಿಸಿದರು.

ಹದ್ದುಬಸ್ತು ಗುರುತಿಸಿಕೊಡಲು ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿ



ದರೂ ವಿಳಂಬ ಮಾಡಲಾಯಿತು. ಅಂತಿಮವಾಗಿ ನ್ಯಾಯಾಲಯದ ಮೊರೆ ಹೋದಾಗ ಸಕಲೇಶಪುರ ಸಿವಿಲ್ ನ್ಯಾಯಾಲಯವು ಜಮೀನಿನಲ್ಲಿ ಯಾವುದೇ ಅಕ್ರಮ ಚಟುವಟಿಕೆಗಳು ನಡೆಯದಂತೆ ತಡೆಯಾಜ್ಞೆ ನೀಡಿದೆ ಎಂದು ಹೇಳಿದ್ದಾರೆ. ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಿ ನಮಗೆ ರಕ್ಷಣೆ ನೀಡಬೇಕೆಂದು ಬೆಂಗಳೂರು ನೆಲಮಂಗಲ ನಿವಾಸಿ ಹೆಚ್.ಎಸ್.ಪಾರ್ವತಮ್ಮ ಅವರ ಪರವಾಗಿ ಕುಟುಂಬದವರು ಗಂಭೀರ ಆರೋಪ ಮಾಡಿದ್ದಾರೆ.

**ದಲಿತ ಮುಖಂಡರ ಆಕ್ಷೇಪ**

ದೂರುದಾರರ ಮನವಿ ಹಿನ್ನಲೆಯಲ್ಲಿ ಸ್ಥಳಕ್ಕೆ ಸರ್ವೆ ಇಲಾಖಾ ಅಧಿಕಾರಿಗಳು ಆಗಮಿಸಿದಾಗ ಸ್ಥಳೀಯ ದಲಿತ ಮುಖಂಡರು ಹಾಗು ಗ್ರಾಮಸ್ಥರು ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಇದು ಗ್ರಾಮಠಾಣಾ ಜಾಗವಾಗಿದ್ದು, ಈಗಾಗಲೇ ಇಲ್ಲಿ ಗ್ರಾಮ ಪಂಚಾಯಿತಿ ಕಚೇರಿ ಕಾರ್ಯನಿರ್ವಹಿಸುತ್ತಿದೆಂದು ಹೇಳಿದ್ದಾರೆ.

ಇದೇ ಜಾಗದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಭವನ ನಿರ್ಮಾಣಕ್ಕಾಗಿ ಭೂಮಿ ಕಾಯ್ದಿರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದೇವೆ. ಈ ಭೂಮಿ ಸಾರ್ವಜನಿಕ ಉದ್ದೇಶಕ್ಕೆ ಹಾಗು ಅಂಬೇಡ್ಕರ್ ಭವನಕ್ಕೆ ಅತ್ಯಗತ್ಯವಾಗಿದೆ. ಸ್ಥಳೀಯರಿಗೆ ಮಾಹಿತಿ ನೀಡದೆ ದಾಖಲೆಗಳನ್ನು ಪರಿಶೀಲಿಸದೆ ಏಕಾಏಕಿ ಸರ್ವೆ ನಡೆಸುವುದು ಸರಿಯಲ್ಲ ಎಂದು ಪಟ್ಟು ಹಿಡಿದರು. ಸ್ಥಳೀಯರ ವಿರೋಧದ ಹಿನ್ನಲೆಯಲ್ಲಿ ಸರ್ವೆ ಅಧಿಕಾರಿಗಳು ಅಳತೆ ಮಾಡದೆ ವಾಪಾಸಾದರು.

**ಉನ್ನತ ಅಧಿಕಾರಿಗಳ ಭೇಟಿಗೆ ಆಗ್ರಹ**

ಒಂದು ಕಡೆ ದೂರುದಾರರು ಇದು ತಮ್ಮ ಹಕ್ಕಿನ ಪಟ್ಟಾ ಜಮೀನು ಎಂದು ದಾಖಲೆಗಳನ್ನು ಮುಂದಿಡುತ್ತಿದ್ದರೆ, ಮತ್ತೊಂದೆಡೆ ಇದು ಗ್ರಾಮಠಾಣಾ ಜಾಗ ಎಂದು ಸ್ಥಳೀಯರು ಪ್ರತಿಪಾದಿಸುತ್ತಿದ್ದಾರೆ.

ತಾಲ್ಲೂಕು ಹಾಗು ಜಿಲ್ಲಾ ಮಟ್ಟದ ಉನ್ನತ ಅಧಿಕಾರಿಗಳು ಸ್ಥಳಕ್ಕೆ ಖುದ್ದು ಭೇಟಿ ನೀಡಿ, ಉಭಯ ಬಣಗಳ ಸಮ್ಮುಖದಲ್ಲಿ ಮೂಲ ಕಾಗದಪತ್ರಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕು.

ಇಲ್ಲವಾದರೆ ಗ್ರಾಮಸ್ಥರ ನಡುವೆ ಪರಸ್ಪರ ಜಗಳ-ಘರ್ಷಣೆಗಳು ಸಂಭವಿಸುವ ಸಾಧ್ಯತೆಯಿದ್ದು, ಜಿಲ್ಲಾಡಳಿತ ತಕ್ಷಣವೇ ಮಧ್ಯಪ್ರವೇಶಿಸಿ ಶಾಂತಿ ಕಾಪಾಡಬೇಕಾಗಿದೆ ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

## ನಾಳೆ ಜಿಲ್ಲಾ ಉಸ್ತುವಾರಿ ಸಚಿವ ಪ್ರವಾಸ

• ಪ್ರಜೋದಯ ವರದಿ

**ಹಾಸನ:** ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಅವರು ಸೆ.26ರಂದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ಶನಿವಾರ ಬೆಳಿಗ್ಗೆ 10 ಗಂಟೆಗೆ ಅರಸೀಕೆರೆಯ ಗೃಹ ಕಚೇರಿಯಲ್ಲಿ ಸಾರ್ವಜನಿಕರ ಭೇಟಿ ಮಾಡುವರು. ಬೆಳಿಗ್ಗೆ 11 ಗಂಟೆಗೆ ಗುರು ಸಿದ್ಧರಾಮೇಶ್ವರ ಸಮುದಾಯ ಭವನದಲ್ಲಿ ನಡೆಯ ಲಿರುವ ತಾಲ್ಲೂಕು ಮಟ್ಟದ ಶಿಕ್ಷಕರ ದಿನಾಚರಣೆಯಲ್ಲಿ ಪಾಲ್ಗೊಳ್ಳುವರು. ಮಧ್ಯಾಹ್ನ 3 ಗಂಟೆಗೆ ಜಿಲ್ಲಾಧಿಕಾರಿ ಕಚೇರಿಯಲ್ಲಿ ಹಾಸನಾಂಬ ಜಾತ್ರಾ ಪೂರ್ವಭಾವಿ ಸಭೆ ನಡೆಸುವರು. ಸಂಜೆ 5 ಗಂಟೆಗೆ ಹಾಸನಾಂಬ ಕಲಾಕ್ಷೇತ್ರದಲ್ಲಿ ನಡೆಯಲಿರುವ ಕನ್ನಡ ಗಾನ ವೈಭವ ಕಾರ್ಯ ಕ್ರಮದಲ್ಲಿ ಭಾಗವಹಿಸುವರು.

## ಪಾರ್ಕಿಂಗ್ ಇಲ್ಲದ ಖಾಸಗಿ ಆಸ್ಪತ್ರೆಗಳ ವಿರುದ್ಧ ಕ್ರಮಕ್ಕೆ ಆಗ್ರಹ

• ಪ್ರಜೋದಯ ವರದಿ




**ಹಾಸನ:** ನಗರದ ಬಹುತೇಕ ಖಾಸಗಿ ಆಸ್ಪತ್ರೆಗಳಲ್ಲಿ ಸಮರ್ಪಕ ಪಾರ್ಕಿಂಗ್ ವ್ಯವಸ್ಥೆ ಇಲ್ಲದ ಕಾರಣ ವಾಹನ ದಟ್ಟಣೆ ಹಾಗು ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆಂದು ಎಎಪಿ ರಾಜ್ಯ ಉಪಾಧ್ಯಕ್ಷ ಅಗಿಲೆ ಯೋಗೀಶ್ ಅವರು ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ಖಾಸಗಿ ಆಸ್ಪತ್ರೆಗಳು ನಿಯಮ ಉಲ್ಲಂಘಿಸಿ ಕಾರ್ಯನಿರ್ವಹಿಸುತ್ತಿವೆ. ನಿಯಮ ಉಲ್ಲಂಘಿಸುವ ಆಸ್ಪತ್ರೆಗಳ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಜಿಲ್ಲಾಡಳಿತ ಹಾಗು ಮಹಾನಗರ ಪಾಲಿಕೆ ಈವರೆಗೆ ಯಾವುದೇ ಪರಿ ಣಾಮಕಾರಿ ಕ್ರಮ ಕೈಗೊಂಡಿಲ್ಲ. ಅಧಿ ಕಾರಿಗಳು ಖಾಸಗಿ ಆಸ್ಪತ್ರೆಗಳೊಂದಿಗೆ ಶಾಮೀಲಾಗಿರುವ ಕಾರಣ ಈ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

ಖಾಸಗಿ ಆಸ್ಪತ್ರೆಗಳಲ್ಲಿ ಆಯು ಷ್ಮಾನ್ ಭಾರತ್ ಸೇರಿ ವಿವಿಧ ಸರ್ಕಾರಿ ಆರೋಗ್ಯ ವಿಮಾ ಯೋಜನೆಗಳ ಸೌಲಭ್ಯವಿದ್ದರೂ, ಕೆಲವು ಆಸ್ಪತ್ರೆಗಳು ರೋಗಿಗ ಳಿಂದ ಹೆಚ್ಚುವರಿ ಹಣ ವಸೂಲಿ ಮಾಡುತ್ತಿವೆಂಬ ದೂರುಗಳು ಕೇಳಿಬರುತ್ತಿವೆ. ಯೋಜನೆಯಡಿ ಉಚಿತವಾಗಿ ದೊರೆಯಬೇಕಾದ ಚಿಕಿತ್ಸೆಗೆ ವಿವಿಧ ಪರೀಕ್ಷೆ ಹಾಗು ಚಿಕಿತ್ಸೆ ಹೆಸರಿನಲ್ಲಿ ಹೆಚ್ಚಿನ ಮೊತ್ತ ವಸೂಲಿ ಮಾಡಲಾಗುತ್ತಿದೆಂಬ ಆರೋಪಗಳ ಕುರಿತು ಜಿಲ್ಲಾಡಳಿತ ತನಿಖೆ ನಡೆಸಬೇಕೆಂದು ಒತ್ತಾಯಿಸಿದರು.

ಸರ್ಕಾರಿ ಆಸ್ಪತ್ರೆಗಳಲ್ಲಿ ಕರ್ತವ್ಯ ನಿರ್ವಹಿಸುವ ಕೆಲವು ವೈದ್ಯರು ಖಾಸಗಿ ಆಸ್ಪತ್ರೆಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವರು ಸ್ವಂತ ಖಾಸಗಿ ಆಸ್ಪತ್ರೆಗಳನ್ನು ನಡೆಸುತ್ತಿದ್ದಾ ರೆಂಬ ಆರೋಪಗಳಿವೆ. ಸರ್ಕಾರಿ ಆಸ್ಪತ್ರೆಯಲ್ಲಿ ಹಾಜರಾತಿ ದಾಖಲಿಸಿ, ಅದೇ ಅವಧಿಯಲ್ಲಿ ಖಾಸಗಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುವ ಪ್ರಕರ ಣಗಳಿದ್ದರೆ ಅವುಗಳ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳ ಬೇಕೆಂದು ಆಗ್ರಹಿಸಿದರು.

ನಗರದ ಶಂಕರಮಠ ರಸ್ತೆಯಲ್ಲಿ ಹಲವು ಆಸ್ಪತ್ರೆಗಳು ಹಾಗು ಖಾಸಗಿ ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. ಬಹುತೇಕ ಸಂಸ್ಥೆಗಳು ಪಾರ್ಕಿಂಗ್‌ಗೆ ಅಗತ್ಯ ಸ್ಥಳಾವಕಾಶ ಕಲ್ಪಿಸದಿರುವುದರಿಂದ ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗುತ್ತಿದೆ. ಪ್ರತಿದಿನ ಸಾರ್ವಜನಿಕರು ಸಮಸ್ಯೆ ಎದುರಿಸುತ್ತಿದ್ದರೂ ಮಹಾನಗರ ಪಾಲಿಕೆ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ ಎಂದು ದೂರಿದರು.

ಎಎಪಿ ಜಿಲ್ಲಾಧ್ಯಕ್ಷ ಆನಂದ್ ತೇಜೂರು, ನಗರಾಧ್ಯಕ್ಷ ಮಧು, ತಾಲ್ಲೂಕು ಅಧ್ಯಕ್ಷ ಮಂಜುನಾಥ್, ಖಾದರ್ ಇದ್ದರು.

## ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಪರೀಕ್ಷಾ ತರಬೇತಿ

• ಪ್ರಜೋದಯ ವರದಿ

**ಹಾಸನ:** ಗ್ರಾಮೀಣ ಹಾಗು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯನ್ನು ಧೈರ್ಯವಾಗಿ ಎದುರಿಸಬೇಕು. ಆ ಮೂಲಕ ಒಳ್ಳೆಯ ಉದ್ಯೋಗ ಪಡೆಯ ಬೇಕೆಂಬ ಉದ್ದೇಶದಿಂದ ಉಚಿತ ತರಬೇತಿ ನೀಡಲಾಗುತ್ತಿದೆಂದು ರೆಡ್ ಕ್ರಾಸ್ ಜಿಲ್ಲಾ ಸಭಾಪತಿ ಹಾಗು ಕೆಎಸ್‌ಪಿ ಕಾರ್ಯದರ್ಶಿ ಹೆಚ್.ಪಿ. ಮೋಹನ್ ಅವರು ತಿಳಿಸಿದರು.

ನಗರದ ಎ.ವಿ.ಕಾಂತಮ್ಮ ಮಹಿಳಾ ಕಾಲೇಜು ಸಭಾಂಗಣದಲ್ಲಿ ಎವಿಕೆ ಕಾಲೇಜು ಹಾಗು ಕೃಷಿಕ್ ಸರ್ವೋದಯ ಫೌಂಡೇಶನ್ ವತಿಯಿಂದ ಬುಧವಾರ ಆಯೋಜಿಸಿದ್ದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕೃಷಿಕ್ ಸರ್ವೋದಯ ಫೌಂಡೇಶನ್ ಕಳೆದ ಎರಡು ದಶಕ ಗಳಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಗುಣಮಟ್ಟದ ತರಬೇತಿ ನೀಡುವ ಕಾರ್ಯದಲ್ಲಿ ತೊಡಗಿಸಿಕೊಂಡಿದೆ. ಹಾಸನ ಸೇರಿ ಮೈಸೂರು, ಚಿಕ್ಕ ಮಗಳೂರು, ಹಿರೇ ಕಲ್ಲೂರು, ತುಮಕೂರು ಹಾಗು ಚಿಕ್ಕಬಳ್ಳಾಪುರ ಸೇರಿ ವಿವಿಧೆಡೆ ತರಬೇತಿ



ಕೇಂದ್ರಗಳನ್ನು ಹೊಂದಿದ್ದು, ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗುತ್ತಿದೆ ಎಂದರು.

ಕೆಎಎಸ್, ಯುಪಿಎಸ್‌ಸಿ, ಬ್ಯಾಂಕಿಂಗ್, ಕೆಪಿಎಸ್‌ಸಿ, ಎಫ್‌ಡಿಎ, ಎಸ್‌ಡಿಎ, ಪಿಡಿಒ, ಪೊಲೀಸ್ ಕಾನ್ಸ್‌ಟೇಬಲ್ ಸೇರಿ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಾರ್ಗದರ್ಶನ ನೀಡಲಾಗುತ್ತಿದೆ. ಸಂಸ್ಥೆಯ ಮೂಲಕ ತರಬೇತಿ ಪಡೆದ ಅನೇಕ ವಿದ್ಯಾರ್ಥಿಗಳು ವಿವಿಧ ಸರ್ಕಾರಿ ಹುದ್ದೆಗಳಿಗೆ ಆಯ್ಕೆಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವರು ಕೆಎಎಸ್ ಹಾಗು ಯುಪಿಎಸ್‌ಸಿ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಿ ಉನ್ನತ ಹುದ್ದೆ ಅಲಂಕರಿಸಿದ್ದಾರೆಂದು ತಿಳಿಸಿದರು.

ಗ್ರಾಮೀಣ ಪ್ರದೇಶದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಗುಣಮಟ್ಟದ ತರಬೇತಿ ಪಡೆಯು ವುದು ಆರ್ಥಿಕ ಕಾರಣಗಳಿಂದ ಕಷ್ಟವಾಗಬಾರದು ಎಂಬ ಉದ್ದೇಶದಿಂದ ಉಚಿತ ತರಬೇತಿ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿಯೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಉಚಿತ ಆನ್‌ಲೈನ್ ತರಬೇತಿ ಆಯೋಜಿಸಲಾಗುವುದು. ಅನುಭವಿ ಅಧ್ಯಾಪಕರು, ನಾಗರಿಕ ಸೇವೆ ಹಾಗು ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳ ತಜ್ಞರಿಂದ ತರಬೇತಿ ನೀಡಲಾಗುವುದೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಎವಿಕೆ ಕಾಲೇಜಿನ ಪ್ರಾಂಶುಪಾಲರಾದ ಶಶಿಕಲಾ ಅವರು ಮಾತನಾಡಿ, ಗ್ರಾಮೀಣ ಭಾಗದಿಂದ ಬರುವ ವಿದ್ಯಾರ್ಥಿಗಳಲ್ಲಿ ಪ್ರತಿಭೆ ಹಾಗು ಸಾಮರ್ಥ್ಯವಿದ್ದರೂ ಸೂಕ್ತ ಮಾರ್ಗ ದರ್ಶನದ ಕೊರತೆಯಿಂದಾಗಿ ಹಲವು ಅವಕಾಶಗಳು ಕೈತಪ್ಪುತ್ತಿವೆ. ಅಂತಹ ವಿದ್ಯಾರ್ಥಿ ಗಳಿಗೆ ಸರಿಯಾದ ಮಾರ್ಗ ದರ್ಶನ ದೊರೆತರೆ ತಮ್ಮ ಸಾಮರ್ಥ್ಯ ವನ್ನು ಪರಿಣಾಮಕಾರಿಯಾಗಿ ಬಳಸಿ ಕೊಂಡು ಪರೀಕ್ಷೆಗಳಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯವಾಗುತ್ತದೆಂದರು. ಸಂಸ್ಥೆ ನಿರ್ದೇಶಕ ನಟೇಶ್, ಹೈಕೋರ್ಟ್ ವಕೀಲ ಗುಡ್ಡೇಗೌಡ, ಎವಿಕೆ ಕಾಲೇಜಿನ ಶ್ರೀಲಕ್ಷ್ಮಿ, ಪಾಪಯ್ಯ, ಶೈಕ್ಷಣಿಕ ಸಂಯೋಜಕ ಪ್ರಜ್ವಲ್, ಸಂಪನ್ಮೂಲ ವ್ಯಕ್ತಿ ಆಕಾಶ್, ಅಮೃತ ರಶ್ಮಿ ಮತ್ತಿತರರಿದ್ದರು.

## ಪಿಎಫ್ ನೀತಿ ವಿರುದ ಗಾರ್ಮೆಂಟ್ಸ್ ನೌಕರರ ಮುಷ್ಕರ

» ಮೊದಲನೇ ಪುಟದಿಂದ

**ಸ್ಥಳಕ್ಕೆ ಅಧಿಕಾರಿಗಳ ಭೇಟಿ**

ರಸ್ತೆ ತಡೆ ಹಿನ್ನಲೆ ತಾಲ್ಲೂಕು ಆಡಳಿತ ಹಾಗು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ನೌಕರರ ಸಮಸ್ಯೆಗಳನ್ನು ಆಲಿಸಿದರು. ಪಿಎಫ್‌ಗೆ ಸಂಬಂಧಿಸಿದ ಸಮಸ್ಯೆಯನ್ನು ಮೇಲಾಧಿಕಾರಿಗಳ ಗಮನಕ್ಕೆ ತಂದು, ಆದಷ್ಟು ಬೇಗ ಪರಿಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುವುದೆಂದು ಭರವಸೆ ನೀಡಿದರು. ಅಧಿಕಾರಿಗಳ ಭರವಸೆಯ ಬಳಿಕ ನೌಕರರು ಪ್ರತಿಭಟನೆಯನ್ನು ಹಿಂಪಡೆದರು. ಇದರಿಂದ ರಸ್ತೆ ಸಂಚಾರ ಸುಗಮಗೊಂಡಿತು.

## ಚಿನ್ನದ ಸರ ದೋಚಿ ಪರಾರಿ

• ಪ್ರಜೋದಯ ವರದಿ

**ಬೇಲೂರು:** ಮಹಿಳೆಯ ಕೊರಳಿಂದ ಚಿನ್ನದ ಸರ ಕಿತ್ತುಕೊಂಡು ಪರಾರಿಯಾಗಿರುವ ಘಟನೆ ಪಟ್ಟಣದ ವೈಕುಂಠ ಬೀದಿಯಲ್ಲಿ ನಡೆದಿದೆ.

ನಿವಾಸಿ ಶಾರದಾಂಬ ಅವರು ತಮ್ಮ ಮನೆ ಮುಂದೆ ಎಂದಿನಂತೆ ರಂಗೋಲಿ ಹಾಕುತ್ತಿದ್ದಾಗ ಬಂದ ಅಪರಿಚಿತ ವ್ಯಕ್ತಿಯೊಬ್ಬ ಬಾಡಿಗೆಗೆ ರೂಂ ಕೇಳಿದ್ದಾನೆ. ಶಾರದಾಂಬ ಅವರು ಇಲ್ಲಿ ರೂಂಗ ಳಿಲ್ಲವೆಂದು ಹೇಳುತ್ತಿದ್ದಂತೆ ಕೊರಳಿಗೆ ಕೈ ಹಾಕಿದ ಅಪರಿಚಿತ 30 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಿತ್ತುಕೊಳ್ಳಲು ಯತ್ನಿಸಿದ್ದಾನೆ. ಮಹಿಳೆ ಜೋರಾಗಿ ಕೂಗಿ ಸರದ ಅರ್ಧಭಾಗ ಹಿಡಿದುಕೊಂಡಿದ್ದರಿಂದ ಸುಮಾರು 10 ಗ್ರಾಂನಷ್ಟು ಸರವನ್ನು ಆತ ಕಿತ್ತುಕೊಂಡು ಹತ್ತಿರದಲ್ಲೇ ನಿಂತಿದ್ದ ಬೈಕ್ ಹತ್ತಿ ಪರಾರಿಯಾಗಿದ್ದಾನೆ. ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019